ಕರ್ನಾಟಕ ಲೋಕಾಯುಕ್ತ, ವಿಧೇಯಕ 1984ಕ್ಕೆ ವಿಧಾನಪರಿಷತ್ ಸೂಚಿಸಿದ ತಿದ್ದುಪಡಿಗಳನ್ನು ಮಾನ್ಯ ಸಭೆಯು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತು ತಿದ್ದುಪಡಿ ಸ್ವೀಕರಿಸಲಾಯಿತು.

## KARNATAKA EDUCATION BILL, 1983

### Motion to consider (contd.)

Mr. Deputy Speaker.—Now further discussion on the Karnataka Bill, 1983. Sri J. A. Fernandez to continue.

3-00 p.m.

Sri J. A. Fernandez.—Mr. Speaker, Sir, yesterday when I was speaking on the Bill I have been slightly misunderstood. I shall be thankful to the press for making the correction. In the minority schools reservations under section 41, Sub clause 3, I have been reported as having mentioned that there should be no reservations for SCs/STs. That was intended only for unaided minority institutions, as the SCs/STs have constitutional safeguards in regard to admission to schools and the unaided minority institutions have also certain rights. It was a matter of being cautions, because any infringement of any right can be challenged in the Courts. Hence, it is not intended to cast any aspersons on any community. I have the greatest regard for the SCs/STs ; and as I mentioned, it is purely a matter of precaution. I shall be most grateful to the press for having it corrected.

The other point which is not clearly reported is in regard to the language formula. I have mentioned the two language plus formula. Probably the "plus" was omitted. I shall be grateful if it is now included because it is essential for parents to decide in which language the students may study. Today, we have so many languages. And I felt that a heavy burden of language at the primary level is not advisable for the students. I have before me an extract from the Governor's speech of last year, where he has mentioned :

> "All the minority languages spoken in the State will be given full protection. All facilities will be extended to those whose mother-tongue is Urdu, Tamil, Telugu, Malayalam, Marathi, Gujarathi, Hindi or any other Indian languages to have their education both in the primary and secondary stages in their own mother-tongue. My Government undertakes to guarantee in spirit and substance all the rights and protection given by the Constitution to the linguistic and other minorities."

I shall sincerely hope that this Government will translate this into actual practice in the course of the implementation of the Education Bill. I agree that Education is not intended to be a study of languages ; it is to build character, integrity and love for other citizens. Therefore, it is also necessary that certain controls and checks are maintained. But this should not in any way lead to a tiflying of the education system.

(Shri K. G. Maheshwarappa in the Chair)

The minority institutions particularly those who are unaided are like a family and any intrusion into family life is quite naturally not acceptable. Hence, some of the provisions of this bill have to be amended suitably. I think we stoopped yesterday in clause 48. regarding fees. There is no objection to the clause regarding collection of fees provided donations are not made a condition for admission in any institution–be it a minority or otherwise.

On page 83, there is a chapter by name "Terms and conditions of service of employees in private educational institutions." While we concede that it is a prerogative of the management of private educational institutions to have their own terms of service conditions for their staff. I do honestly feel that some monitoring from the Government side is necessary and it is essential that our teachers, the administrative staff and subordinate staff in all institutions-be they minority or otherwise-should have certain minimum guarantees not only of their service but also scales of pay, retirement benefits, etc. Today, in some institutions, I am aware that many of our teachers are kept on a temporary basis for a number of years. It is a very unhealthy practice as sooner or later they are sent back to poverty and misery. Some protection is therefore essential for the teaching fraternity as well as for the administrative and other staff working in educational institutions–be they minority or otherwise.

Similarly, on page 88 section 96(5) needs to be amended. It reads as follows :

> "No Civil Court shall have jurisdiction in respect of matters over which the tribunal exercises any power and this Act."

It is too sweeping an authority for the Government. My submission is that there must be a right of appeal to a Superior court, i.e. The High Court.

In Clause 106–Governing Council to hand over properties, records etc. to competent authority on closure, etc. of private educational institution. My submission is that the private institutions generally have adequate resources. They have buildings, they have furniture and so many other inputs and they own laboratories. So much money has already been invested. So, I do not think it is required that the Government should in any way try to take over any of these properties. On the other hand, if there is any malpractice Government can certainly supervise and monitor the situation and take appropriate action. Therefore this particular bill will refer only to such part of the provision as it applies to the Minorities. It should not be a blanket condition.

Chapter 16–State Educational Advisory Council, Clause 198 (2) (d) is as follows :

> "Nominated Members–not exceeding ten members nominated by the State Government of whom three shall be persons belong-

ing to Scheduled Castes and Scheduled Tribes and at least one shall be a woman, two from other Backward Classes and one from Minorities."

My submission is that today roughly 35% of the population of Karnataka State belong to minority communities, So, it is but fair that there should be at least 3 members from the minorities on this Advisory Council.

Under 'Penalties' my submission on behalf of the minority institutions is that only those provisions of the bill which apply to them will be subject to any penalties. The other parts of these provisions will therefore not apply, particularly item No. 122 as these are adequately covered by Art. 30(1) of the Constitution.

In Clause 140–Application of the Act to certain Institutions-While it is a very welcome inclusion in the bill it will be advisable to have it inserted earlier i.e. before the commencement of the bill itself as the interpretation of this will be left entirely to the people and officers in the field like AEOs, DEOs, DDPIs etc. and for every provision in the bill they will be the final authority to interpret. it.

Mr. Chairman.—You have not cleared about clause 140.

Sri J. A. Fernandez.—The interpretation of clause 140 will be left to the discretion of the AEOs at the district level. Because it is not clear as to what provisions of this bill will fall under Clause 140 and what provisions will not, it is difficult.

Mr. Chairman.—Those provisions which are inconsistent with Art. 30 (1) will not fall. Does not the clause 140 safficiently safeguard ?........

Sri J. A. Fernandez.—Who is to interpret clause 140 ? It is left to the discretion of the AEOs. Every institution will have to go to the Court to clarify as to which provisions do not apply to minority institutions. It will be advisable if those sections of the bill which do not apply to minority institutions are clearly specified in the bill itself.

Sri A. Lakshmisagar.—The Clause 140 is intended to provide wholesome protection in conformity with Art. 30 (1) of the Constitution to all linguistic and religious minorities. A repetition of this clause in several other places in the bill will not in any way improve or add to the protection already given. Even if this clause is not mentioned or does not find a place within the clauses of the bill Art. 30 (1) of the Constitution is still there. All the interpretations of course particularly of the Supreme Court are there to give ample protection more than what is necessary. Protection is already rendered, already given. Nobody can tamper or otherwise deal with or dilute the protection that is given to the linguistic and religious minorities. He says wherever such a necessity arises this provisions should make a mention and it should find a place.

Article 30 (1) of the Constitution is mentioned only in one place in the entire Constitution. If the intention of the author or of the founders of the Constitution was that the protection should be given to all the linguistic and religious minorities wherever this expression finds a place in the articles of the Constitution the mention of Article 30 should also be there, if this argument is accepted. Therefore my submission to Sri Fernandez, the spokesman for his community, will kindly see that similar provision is there in the Kerala Education Act of 1957 and that act has been challenged several times and it has stood the scrutiny of the Court so far from 1957 till today. It may also be recalled at this point of time that by this section of education bill quite a few Government fell in Kerala. Therefore, we have had the benefit of the experience of the states in our country, particularly in the southern states including the State of West Bengal, where similar protection, similar language is used, almost identical, bodily lifted out and put into the provisions of this bill. Therefore it is intended to give the fullest possible protection according to the provisions of the Constitution as interpreted by the Supreme Court.

ಶ್ರೀ ಎಂ. ಎಂ. ನಡಾಫ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳುತ್ತಾರೆ ಅಲ್ಪ ಸಂಖ್ಯಾತರಿಗೆ ನಾವು ರಕ್ಷಣೆ ಕೊಡುತ್ತೇವೆಂದು, ಆದರೆ ಮೇಲಿಂದ ಮೇಲೆ ಈ ಅಲ್ಪಸಂಖ್ಯಾತರ ಮೇಲೆ ಗದಾ ಪ್ರಹಾರ ಮಾಡುತ್ತಿದ್ದಾರೆ. ಚೆಕ್ಸ್ ಅಂಡ್ ಬ್ಯಾಲೆನ್ಸ್ ಏನು ಇದೆ ಅದನ್ನು ತಾವು ಪ್ರತಿಯೊಂದು ಸೆಕ್ಷನ್‌ನಲ್ಲಿ ಕೂಡ ಅಳವಡಿಸಿದರೆ ಆಗ ಸ್ವಲ್ಪ ಈ ಅಲ್ಪಸಂಖ್ಯಾತರಿಗೆ ಅನುಕೂಲವಾಗಬಹುದು ಆಗ.......

**Sri Lakshmisagar.**—Yes, of course. I forgot to say on one more point raised by Sri Fernandez. If it is found necessary, I believe it is necessary, while rules are framed or when rules are framed sufficient precaution will be taken to see that all the protection you require from the point of view of administration to deal with sufficient layers of administrative machinery like AEOs DEOs or Commissioner of Education and other officers who are made competent authorities under the provision of the bills in dealing with them, rules may be made to see that the import of Article 30 (1) of the Constitution is also made a mention of it, in which case all your fears will be allayed and there would be no difficulty in getting fullest possible protection as is intended by Article 30(1) of the Constitution.

Sri J. A. Fernandez.—I am very thankful indeed to the Hon. Minister for giving this assurance. But at the same time in respect of the rules which are existing at present amendments have been made a number of times and the institutions will suffer.

Mr. Chairman.—You have got constitutional guarantee.

Sri M. M. Nadaf.—For every small thing they will have to go to High Court to get them redressed. This is the position of the minority institutions. That is why the Hon. Member was insisting that this should be incorporated in almost all the sections so that

it is quite clear and the officers can judiciously exercise the powers vested in this Act. That is the intention of the Hon. Member.

Sri J. A. Fernandez.—I hope the assurance given by the Hon. Minister Sri Lakshmisagar will take care of the eventualities. It is possible that when rules are framed to this bill they can be clearly interpreted to the various officers in the field. That will more or less satisfy the present submission. Before concluding Sir, I would like to make one more point, i.e., while we have these minority institutions rendering yeoman service to the Government by teaching so many students, developing their personalities and making them useful citizens of the country, it is also deplorate that the Government does not have the type of institution to develop the youngsters into future citizens of tomorrow. Most of the Government and Corporation Schools in the State are ill-equipped, teachers are lacking, education is missing, corruption is rampant. It is to be sincerely hoped that this Government which is interested in all sections of the community will be kind enough to do something positive about improving the qualitative standard of education, particularly in the Government and Corporation Schools, not only in the city but also in the rural areas where adequation appears completely lacking because of poor facilities available. With these few words, I thank you very much for having given me the privilege of initiating the discussion on the Education Bill.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ).— ಮಾನ್ಯ ಸಭಾಪತಿಗಳೆ, ಈ ಶಿಕ್ಷಣ ವಿದೇಯಕವನ್ನು ಸರ್ಕಾರ ಬಹಳ ವಿಚಾರಮಾಡಿ ತಂದನಂತರ ಅದನ್ನು ಜಂಟೀ ಪರಿಶೀಲನಾ ಸಮಿತಿಗೆ ಕಳುಹಿಸಿ ಲಲ್ಲಿ ಪರಿಶೀಲನೆಮಾಡಿ ಇವತ್ತು ಶಿಕ್ಷಣ ವಿಧೇಯಕವನ್ನು ಸಭೆಯ ಮುಂದೆ ಮಾನ್ಯ ಶಿಕ್ಷಣ ಸಚಿವರು ತಂದಿದ್ದಾರೆ. ಇದರ ಉದ್ದೇಶ ಎಷ್ಟು ಪ್ರಾಮುಖ್ಯವಾಗಿದೆ ಎಂಬುದನ್ನು ನಾನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ. ಇರತಕ್ಕ ಸಮಸ್ಯೆಗಳು ಇದರಿಂದ ಪರಿಹಾರವಾಗುತ್ತವೆಯೇ ಎನ್ನುವ ಬಗ್ಗೆ ನಾವು ವಿಚಾರಮಾಡಬೇಕಾಗುತ್ತದೆ. ಇದರಲ್ಲಿ ಹೇಳತಕ್ಕದ್ದು ಇಷ್ಟೆ, ಶಿಕ್ಷಣ ಸಂಸ್ಥೆಗಳು ಚೆನ್ನಾಗಿ ನಡೆಯಬೇಕು, ಶಿಕ್ಷಣದ ಗುಣಮಟ್ಟ ಉತ್ತಮ ರೀತಿಯಲ್ಲಿರಬೇಕು, ಎಲ್ಲೂ ಕೂಡ ಅಸಮಾನತೆ ಇರಕೂಡದು ಶಿಕ್ಷಣ ಕ್ಷೇತ್ರದಲ್ಲಿರತಕ್ಕ ಅದರಲ್ಲೂ ಹೆಚ್ಚಾಗಿರತಕ್ಕ ಶೋಷಣೆಯನ್ನು ನಿವಾರಿಸಬೇಕು, ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರಿಗೆ ಇರತಕ್ಕ ತೊಂದರೆಗಳನ್ನು ಅಂದರೆ ಸರ್ಕಾರಿ ಕ್ಷೇತ್ರದಲ್ಲಿ ಮತ್ತು ಖಾಸಗಿ ಕ್ಷೇತ್ರದಲ್ಲಿರುವ ಶಿಕ್ಷಕರಿಗೆ ಇರುವ ವ್ಯತ್ಯಾಸವನ್ನು ಹೋಗಲಾಡಿಸುವುದಕ್ಕೆ ಒಂದು ಸಮಗ್ರ ಶಿಕ್ಷಣ ಮಸೂದೆಯನ್ನು ತರುತ್ತೇವೆಂದು ಹೇಳಿದ್ದು ಅದರಂತೆ ಈಗ ತಂದಿದ್ದೀರಿ, ನಿಮ್ಮ ಉದ್ದೇಶ ಎಷ್ಟರಮಟ್ಟಿಗೆ ಸಾರ್ಥಕವಾಗಿದೆ ಈ ಎಲ್ಲಾ ವಿಷಯಗಳನ್ನು ಪರಿಶೀಲನೆ ಮಾಡಬೇಕೆಂದು ವಿಚಾರ ಮಾಡಿದಾಗ, ಇದರ ಬಗ್ಗೆ ಸಾಕಷ್ಟು ಇನ್ನು ಅಭ್ಯಾಸವಾಗಿಲ್ಲವೇನೋ ಎಂದು ಅನಿಸುತ್ತದೆ. ಇದರ ಬಗ್ಗೆ ವಿವರವಾಗಿ ಅಂತರ್ಗತವಾಗಿ ಒಳಹೊಕ್ಕಿ ನೋಡಬೇಕಾಗಿತ್ತು ಎನ್ನುವ ಅನಿಸಿಕೆ ನಮಗೆ ಬರುತ್ತದೆ. ಏಕೆಂದರೆ ಈ ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿಯವರು ನಡೆಸತಕ್ಕ ವಿದ್ಯಾಸಂಸ್ಥೆಗಳು ಹೆಚ್ಚು ಇವೆ. ಪೂರ್ವ ಪ್ರಾಥಮಿಕ ತರಗತಿಯಿಂದ ಹಿಡಿದು ತಾಂತ್ರಿಕ ಶಿಕ್ಷಣದವರೆಗೆ ಆಮೇಲೆ ಮೆಡಿಕಲ್ ಶಿಕ್ಷಣ, ಇಂಜಿನಿಯರಿಂಗ್ ಶಿಕ್ಷಣ ಎಲ್ಲಾ ಶಿಕ್ಷಣಗಳನ್ನು ಖಾಸಗಿ ಸಂಸ್ಥೆಗಳಂ ನೀಡುತ್ತಿವೆ. ವಿದ್ಯಾರ್ಥಿಗಳ ಸಂಖ್ಯೆಯಲ್ಲೂ ಕೂಡ ಹೆಚ್ಚು ಪಾಲು ಖಾಸಗಿ ಸಂಸ್ಥೆಗಳು ನಡೆಸತಕ್ಕ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸರ್ಕಾರಿ ಶಿಕ್ಷಣ ಶಾಲೆಗಳಲ್ಲಿರುವುದಕ್ಕಿಂತ ಜಾಸ್ತಿ ಸಂಖ್ಯೆಯಲ್ಲಿದ್ದಾರೆ. ಹೆಚ್ಚು ಶಿಕ್ಷಣ ಸಂಸ್ಥೆಗಳು ಇರತಕ್ಕದ್ದು ಕೂಡ ಖಾಸಗಿ ಕ್ಷೇತ್ರದಲ್ಲಿ. ರಾಜ್ಯದಲ್ಲಿ ಹೆಚ್ಚು ಅನುಕೂಲವಾಗುತ್ತಿರುವುದು ಖಾಸಗಿ ಶಿಕ್ಷಣ ಸಂಸ್ಥೆಗಳಿಂದ. ಸರ್ಕಾರಿ ಶಿಕ್ಷಣ ಕ್ಷೇತ್ರಕ್ಕಿಂತಲೂ ಖಾಸಗಿ ಶಿಕ್ಷಣ ಕ್ಷೇತ್ರ ಹೆಚ್ಚಿನ ಪಾತ್ರವನ್ನು ತೆಗೆದುಕೊಂಡಿದೆಯೆಂದು ಹೇಳಬಹುದು, ಖಾಸಗಿ ಶಿಕ್ಷಣ ಸಂಸ್ಥೆಗಳು ಶೋಷಣೆ ಮಾಡುತ್ತಿರುವ ಅಂದರೆ ಫೀ ತೆಗೆದುಕೊಳ್ಳುವುದು ಹೆಚ್ಚು ಇವೆ, ಲೆಕ್ಕ ಬರೆಯದೆ ಫೀ ತೆಗೆದುಕೊಳ್ಳುತ್ತಾರೆ, ಅಲ್ಲಿರತಕ್ಕವರಿಗೆ ಎಲ್ಲರಿಗೂ ಸಮಾನ ಅವಕಾಶ ಸಿಗುವುದಿಲ್ಲ, ಅಲ್ಲಿರತಕ್ಕ ಶಿಕ್ಷಕರನ್ನು ಶೋಷಣೆ ಮಾಡುತ್ತಾರೆನ್ನುವ ಇಂತಹ ಸಾಮಾನ್ಯವಾದ ದೂರುಗಳನ್ನು ನಾವು

ಕೇಳುತ್ತಾ ಬಂದಿದ್ದೇವೆ. ಸರ್ಕಾರ ಶಿಕ್ಷಣ ಮಾಧ್ಯಮದಲ್ಲಿ ಖಾಸಗಿ ಶಿಕ್ಷಣ ಕ್ಷೇತ್ರಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಅನುಕೂಲಗಳನ್ನು ಕಲ್ಪಿಸಿಕೊಟ್ಟಾಗ ಇಂತಹ ಶೋಷಣೆಗಳನ್ನು ತಪ್ಪಿಸಬಹುದು. ಒಂದು ತಾಲ್ಲೂಕಿನಲ್ಲಿ ಒಂದೊಂದು ರೀತಿಯ ಶಿಕ್ಷಣ ಕೊಡತಕ್ಕದ್ದು ಸರಿಯಾದುದಲ್ಲ, ನಾಡಿನ ಪ್ರತಿಯೊಬ್ಬ ಪ್ರಜೆಗೂ ಸುಲಭವಾಗಿ ಶಿಕ್ಷಣ ಸಿಗುವಂತೆ ಆಗಬೇಕು. ಈಗ ಪ್ರಾಥಮಿಕ ಶಿಕ್ಷಣ ಕಡ್ಡಾಯವೆಂದು ಹೇಳಿದ್ದೇವೆ. ಪ್ರತಿಯೊಬ್ಬರಿಗೂ ಶಿಕ್ಷಣ ಸುಲಭವಾಗಿ ಸಿಗುವಂತೆ ಮಾಡಿದರೆ ಈ ಸಮಗ್ರ ಶಿಕ್ಷಣ ಮಸೂದೆಯನ್ನು ತಂದದ್ದಕ್ಕೆ ಸಾರ್ಥಕವಾದಂತೆ ಆಗುತ್ತದೆ. ಈಗ ಇರತಕ್ಕ ವ್ಯವಸ್ಥೆ ಏನು ? ಪೂರ್ವ ಪ್ರಾಥಮಿಕ ಶಾಲೆಗೆ ಸೇರಿಸಬೇಕಾದರೆ ಬೆಂಗಳೂರಿನಲ್ಲಿ ಬಹಳ ಕಷ್ಟವಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮಂತ್ರಿಗಳ ಮಕ್ಕಳಿಗೂ ಪ್ರವೇಶ ಸಿಗಲಿಕ್ಕೆ ತೊಂದರೆಯಾಗಿರಬಹುದು. ಪೂರ್ವ ಪ್ರಾಥಮಿಕ ಶಿಕ್ಷಣ ಪಡೆಯಲಿಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಸಿಗುವುದಿಲ್ಲ, ಅದಕ್ಕೆ ಬೇರೆ ಅನುಕೂಲ ಮಾಡಲಿಕ್ಕೆ ಸರ್ಕಾರ ಒಂದು ವ್ಯವಸ್ಥೆ ಮಾಡಬೇಕು. ಈ ಮಸೂದೆಯಲ್ಲಿ ಅಂತಹ ಶಾಲೆಗಳನ್ನು ಸರ್ಕಾರ ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಲಿಕ್ಕೆ ಅನೇಕ ಯೋಚನೆಗಳನ್ನು ಮಾಡಿದೆ ಎನ್ನುವುದು ಸಹಜವಾಗಿದೆ. ಈಗಾಗಲೇ ಸರ್ಕಾರದ ನಿಯಂತ್ರಣದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಸೇರಿವೆ. ಕಾನೂನು ಇದ್ದರೂ ಸಹ ಸರಿಯಾಗಿ ನೋಡುತ್ತಿರಲಿಲ್ಲ, ಆ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಕೆಲವರು ಶಾಲೆಗಳನ್ನು ನಡೆಸದೆ ಮುಚ್ಚಿಕೊಂಡು, ಆ ಶಾಲೆಯ ಹೆಸರಿನಲ್ಲಿ ಹಣವನ್ನು ಪಡೆದುಕೊಳ್ಳಲಿಕ್ಕೆ ಅನುಕೂಲವಾಗುತ್ತಿತ್ತು. ಈಗ ಸರ್ಕಾರ ಖಾಸಗಿಯುವರನ್ನು ನಿಯಂತ್ರಣದಲ್ಲಿಟ್ಟುಕೊಂಡಿಲ್ಲ, ಇನ್ನು ಮುಂದೆ ತಾವು ಎಷ್ಟರ ಮಟ್ಟಿಗೆ ನಿಯಂತ್ರಣವನ್ನು ಸಾಧಿಸಬಲ್ಲಿರಿ ? ಕಾನೂನುಗಳು ಇದ್ದು ಅನ್ಯಾಯ ನಡೆದರೂ ನೀವು ಸುಮ್ಮನೆ ಇರುವಾಗ, ಇಂತಹ ಕಾನೂನುಗಳನ್ನು ತಂದು ನೀವು ಹೊಸದಾಗಿ ಸಾಧಿಸುವುದು ಏನಿದೆ ? ನೀವು ಸಾಧಿಸುವುದು ನಮಗೆ ಕಂಡುಬರುತ್ತಿಲ್ಲ. ನೀವು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ತೆಗೆದುಹಾಕಿ, ಸ್ವತಂತ್ರವಾಗಿ ಶಿಕ್ಷಣ ಸಂಸ್ಥೆಗಳನ್ನು ಮಾಡಿ ಮುಂದುವರಿಸಿಕೊಂಡು ಹೋಗುತ್ತೇವೆಂದು ಹೇಳಿ. ಇಂತಹ ತಾರೀಖಿಗೆ ರಾಷ್ಟ್ರೀಕರಣವಾಗಿದೆ ನಾವು ನಡೆಸುತ್ತೇವೆಂದು ಹೇಳಿ, ಅದನ್ನು ಹೇಳುವುದಕ್ಕೆ ತೊಂದರೆ ಏನಿದೆ ? ನಿಮ್ಮ ಉದ್ದೇಶ ಎಲ್ಲರಿಗೂ ಸಮಾನವಾದ ಶಿಕ್ಷಣ ದೊರೆಯಬೇಕು. ನೀವು ಸುಮ್ಮನೆ ಏತಕ್ಕೆ ಈ ರೀತಿ ಜಗ್ಗಾಟ ಆಡುತ್ತೀರಿ ? ಸಮಗ್ರ ಶಿಕ್ಷಣ ಕಾಯಿದೆಯನ್ನು ತರುತ್ತೇವೆಂದು ಹೇಳಿ ಈ ತರಹ ಎಳೆದಾಟ ಮಾಡುವುದು ಏತಕ್ಕೆ ? ಇನ್ನು ಮುಂದೆ ಖಾಸಗಿ ಮ್ಯಾನೇಜ್‌ಮೆಂಟ್‌ನವರು ಇರಕೂಡದು, ಸರ್ಕಾರ ಎಲ್ಲಾ ವಿದ್ಯಾಭ್ಯಾಸ ವ್ಯವಸ್ಥೆ ಮಾಡುತ್ತದೆಂದು ಹೇಳಿ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ತಾಂತ್ರಿಕ ಶಿಕ್ಷಣ ಯಾವುದೇ ಇರಬಹುದು, ಮೆಡಿಕಲ್ ಶಿಕ್ಷಣ ಇರಬಹುದು, ಇಂಜಿನಿಯರಿಂಗ್ ಶಿಕ್ಷಣ ಇರಬಹುದು ಎಲ್ಲವನ್ನು ನಾವು ರಾಷ್ಟ್ರೀಕರಣ ಮಾಡಿ ಸರ್ಕಾರದಿಂದ ನಿಯಂತ್ರಣಕ್ಕೆ ಒಳಪಡಿಸಿದ್ದೇವೆಂದು ಹೇಳಿದ್ದರೆ ಅದನ್ನು ಒಪ್ಪಬಹುದಾಗಿತ್ತು. ಇದರಲ್ಲಿ ಒಳ ವ್ಯವಹಾರ ಮಾಡಲಿಕ್ಕೆ ಸಾಕಷ್ಟು ಅವಕಾಶವಿದೆ. ಪ್ರಭಾವಯುತವಾದ ವ್ಯಕ್ತಿಗಳು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ ಅವರೆಲ್ಲರೂ ಕೂಡ ಆಚೆ ಈಚೆ ಹೇಗೆ ಬೇಕಾದರೂ ಹೋಗುವುದಕ್ಕೆ ಅವಕಾಶವಿದೆ. ಇದನ್ನು ನಿಯಂತ್ರಣ ಮಾಡಲಿಕ್ಕೆ ಹೊರಟರೆ ಯಥಾಪ್ರಕಾರ ಸ್ವಲ್ಪ ಲೆಕ್ಕ ಕೊಡುತ್ತಾರೆ, ಬಾಕಿ ಇರುವುದನ್ನು ಹಾಗೆಯೇ ಇಟ್ಟುಕೊಳ್ಳುತ್ತಾರೆ. ಕೆಲವೊಂದಕ್ಕೆ ಲೆಕ್ಕ ಇಡುವುದಿಲ್ಲ, ನೀವು ಇದರಲ್ಲಿ ಎಲ್ಲದರ ಲೆಕ್ಕ ಕೊಡಬೇಕೆಂದು ಹೇಳಿದ್ದೀರಿ. ಇದು ಹೇಗಾಗುತ್ತದೆ ಅಂದರೆ ಸಹಕಾರಿ ಸಂಸ್ಥೆಗಳಲ್ಲಿ ಆಡಿಟ್ ರಿಪೋರ್ಟ್ ಕೊಡುವುದನ್ನು ನೀವು ನೋಡಿರಬಹುದು. ಆಡಿಟ್ ರಿಪೋರ್ಟ್ ಸರ್ಕಾರಕ್ಕೆ ಹೋಗದಿದ್ದರೂ ಸಹ ಗ್ರಾಂಟ್ ಕೊಡಲಾಗುತ್ತದೆ. ಸಂಪೂರ್ಣವಾಗಿ ಲಾಸ್ ಆಗಿದೆ ಎಂದು ಹೇಳಿದರೂ ಕೂಡ ಮಿಸ್ ಅಪ್ರೋಪ್ರಿಯೇಷನ್ ನಡೆದಿದೆಯೆಂದು ಹೇಳಿದರೂ ಅನೇಕ ಸಲ ಅಂತಹ ಸಂಸ್ಥೆಗಳಿಗೆ ಅನುದಾನ ಕೊಟ್ಟಿರತಕ್ಕ ಉದಾಹರಣೆಗಳಿವೆ. ನಮ್ಮ ಆಡಳಿತ ವ್ಯವಸ್ಥೆ ಎಷ್ಟು ಚುರುಕಾಗಿದೆ ಎಂಬುದಕ್ಕೆ ಇಂಥಾ ಉದಾಹರಣೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಯಾವುದು ಉತ್ತಮ ಗುಣಮಟ್ಟವಿದೆ ಅಂತಹ ಸಂಸ್ಥೆಗಳಿಗೆ ಅನುದಾನ ಕೊಡತಕ್ಕ ವ್ಯವಸ್ಥೆಯಾಗಬೇಕು. ಯಾವ ಸಂಸ್ಥೆ ಉತ್ತಮವಾಗಿ ಕೆಲಸಮಾಡುತ್ತಿಲ್ಲ, ಯಾವ ಸಂಸ್ಥೆ ಉತ್ತಮ ಶಿಕ್ಷಣ ಕೊಡುತ್ತಿದೆ, ಯಾವ ಸಂಸ್ಥೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ತಯಾರುಮಾಡುತ್ತಿದೆ ಎಂಬುದನ್ನು ಮುಖ್ಯವಾಗಿ ಕಂಡುಹಿಡಿದುಕೊಳ್ಳಬೇಕಾಗಿದೆ. ನಮ್ಮ ವಿದ್ಯಾರ್ಥಿಗಳ ಗುಣಮಟ್ಟ ಕಡಿಮೆಯಾಗುತ್ತಿದೆ. ವಿದ್ಯಾರ್ಥಿಗಳು ಹಾಗೆ ಹೀಗೆ ಎಂದು ಹೇಳುವುದಕ್ಕೆ ಆಗುತ್ತಿಲ್ಲ. ವಿದ್ಯಾರ್ಥಿಗಳ ಗುಣಮಟ್ಟ ಹೋಗಿದೆಯೆಂದು ವಿದ್ಯಾರ್ಥಿಗಳಿಗೆ ಹೇಳಿದರೆ ಅವರು ಹೇಳಿದವರನ್ನು ಹೊಡೆಯುತ್ತಾರೆ. ವಿದ್ಯಾರ್ಥಿಗಳ ಗುಣಮಟ್ಟ ಹೋಗಿದೆಯೆಂದು ನಾವು ನೀವು ಹೇಳುವಹಾಗೆ ಇಲ್ಲ,

ಗುಣಮಟ್ಟ ಹೋಗಿದೆಯೆಂದು ಹೇಳುವಹಾಗಿಲ್ಲ. ಮನಸ್ಸಿನೊಳಗೇ ನೀವು ಅಂದುಕೊಳ್ಳಬೇಕು. ಗುಣಮಟ್ಟ ಏಕೆ ಕಡಿಮೆಯಾಗುತ್ತಿದೆ ಎಂದರೆ ಶಿಕ್ಷಕರಲ್ಲಿ ಗುಣಮಟ್ಟ ಕಡಿಮೆಯಾಗಿದೆ, ಶಿಕ್ಷಣ ಕೊಡುವ ನೀತಿನಿಯಮಗಳನ್ನು ಮಾಡುವ ಕಾಲದಲ್ಲಿ ಗುಣಮಟ್ಟ ಕಡಿಮೆಯಾಗಿದೆ. ಇದಕ್ಕೆ ಏನು ಕಾರಣ ? ನೀವು ಇದನ್ನು ನಡೆಸಿಕೊಂಡು ಹೋಗಲಿಕ್ಕೆ ಏನು ಅಧಿಕಾರ ಕೊಟ್ಟಿದ್ದೀರಿ. ಅದು ಸರಿಯೆನ್ನುವುದಾದರೆ

ಇನ್ನೂ ಹತ್ತು ವರ್ಷಗಳಾದರೂ ಅದು ಹೀಗೆಯೇ ನಡೆದುಕೊಂಡು ಹೋಗುತ್ತದೆ. ಕಳೆದ ಸಲ ಇಷ್ಟಿಷ್ಟೇ ಕ್ಯಾಪಿಟೇಷನ್ ಶುಲ್ಕವನ್ನು ಇಂಜಿನಿಯರಿಂಗ್ ಕಾಲೇಜಿನವರು ತೆಗೆದುಕೊಳ್ಳಬೇಕೆಂದು ನಿಗದಿ ಮಾಡಿದಿರಿ. ಅವರು ಅಷ್ಟೇ ತೆಗೆದುಕೊಂಡಿದ್ದಾರಾ ? ಅದಕ್ಕಿಂತಲೂ ಎರಡರಷ್ಟು ತೆಗೆದುಕೊಂಡಿದ್ದಾರೆ. ಜಾಸ್ತಿ ದುಡ್ಡು ತೆಗೆದುಕೊಂಡಿದ್ದಾರೆಯೇ ಹೊರತು ಕಡಿಮೆ ತೆಗೆದುಕೊಂಡಿಲ್ಲ, ಯಾರಿಗೆ ನೇರವಾಗಿ ಇದರಮೇಲೆ ನಿಯಂತ್ರಣ ಇದೆಯೋ, ಕೆಲವುಕಡೆ ಅವರ ಆಶೀರ್ವಾದದಿಂದಲೇ ಇದು ನಡೆಯುತ್ತಿದೆಯೇ ಹೊರತು, ಅವರ ಆಶೀರ್ವಾದ ಇಲ್ಲದೇ ಹೋದರೆ ಇದು ನಡೆಯುವುದಿಲ್ಲ. ಇದಕ್ಕೆ ದ್ರಾವಿಡ ಪ್ರಾಣಾಯಾಮ ಏಕೆ ಬೇಕಿತ್ತು ? ಇದರ ಬದಲಾಗಿ ನೇರವಾಗಿ ಈ ವ್ಯವಸ್ಥೆಯನ್ನು ಹೋಗಲಾಡಿಸಬೇಕೆಂದಿದ್ದರೆ ಮಾಡಲಿಕ್ಕೆ ಆಗುತ್ತಿರಲಿಲ್ಲವೇ ? ಅಂದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರತಿದಿನ ಮಂತ್ರಿಗಳ ಹತ್ತಿರ ಓಡಾಡಬೇಕು.

ಶ್ರೀ ಕೆ. ಹೆಚ್. ರಂಗನಾಥ್.— ದ್ರಾವಿಡ ಪ್ರಾಣಾಯಾಮ ಅಂದರೆ ನಿಮಗೆ ಗೊತ್ತೇನು ?

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.— ದ್ರಾವಿಡ ರೀತಿಯೆಂದರೆ ಸುತ್ತು ಹಾಕಿ ಮಾಡುವುದು. ಈ ರೀತಿಯಿಂದ ಇದು ಶುದ್ಧ ಪ್ರಾಣಾಯಾಮ ಅಲ್ಲ. ಇದರಿಂದ ನಿಮ್ಮ ಸಾಧನೆ ಏನು ಎಂದರೆ ಸೊನ್ನೆಯೆಂದೇ ಹೇಳಬೇಕಾಗುತ್ತದೆ. ನಿಜವಾಗಿಯೂ ನಿಮ್ಮ ಉದ್ದೇಶ ಸಾಧನೆಯಾಗುತ್ತಿಲ್ಲ. ನಾವು ವಿರೋಧಪಕ್ಷದಲ್ಲಿದ್ದೇವೆ, ಸರ್ಕಾರದ ಒಂದು ಉತ್ತಮ ಕಾಯಿದೆಯನ್ನು ವಿರೋಧಿಸಬೇಕು ಎಂದಲ್ಲ. ಏನು ಈ ಶಿಕ್ಷಣ ಸಂಸ್ಥೆಗಳಲ್ಲಿ ಶೋಷಣೆ ನಡೆಯುತ್ತಿದೆ. ಹೇಗೆ ಇದು ನಡೆಯುತ್ತಿದೆ. ಇದನ್ನು ಹೇಗೆ ತಪ್ಪಿಸುವುದು, ಗುಣಮಟ್ಟವನ್ನು ಹೇಗೆ ಹೆಚ್ಚಿಸುವುದು ಎನ್ನುವುದರ ಬಗ್ಗೆ ಏನೂ ಹೇಳಿಲ್ಲ. ಆಟದ ಬಯಲುಗಳು, ಪೀಠೋಪಕರಣಗಳು, ಪರಿಕರಗಳ ಬಗ್ಗೆ ಹೇಳಿದ್ದಾರೆ ಈ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡಿದ್ದೇ ಅನಿವಾರ್ಯ ಪರಿಸ್ಥಿತಿಯಲ್ಲಿ. ಹಳ್ಳಿಗಾಡಿನಲ್ಲಿ, ಕೆಲವು ಕಡೆಗಳಲ್ಲಿ ದೊಡ್ಡ ದೊಡ್ಡ ನಗರಗಳನ್ನು ಬಿಟ್ಟರೆ ಬೇರೆ ಕಡೆಗಳಲ್ಲಿ ತಾಂತ್ರಿಕ ವಿದ್ಯಾಭ್ಯಾಸ ಇಲ್ಲದೇ ಇರುವುದಕ್ಕೋಸ್ಕರ ಈ ಶೋಷಣೆ ಪ್ರಾರಂಭವಾಯಿತು. ನಮ್ಮ ಅವಶ್ಯಕತೆಯಿಂದಲೇ ಈ ಶೋಷಣೆಯ ಪ್ರಾರಂಭ. ಈ ಪೂರ್ವ ಪ್ರಾಥಮಿಕ ಶಾಲೆಗಳೇ ಇರಲಿ, ತಾಂತ್ರಿಕ ಶಾಲೆಗಳೇ ಇರಲಿ, ಬೇಕು ಎಂದಾಗ ಬೇರೆ ಕಡೆಗೆ ಹೋಗಿ ವಿದ್ಯಾಭ್ಯಾಸ ಮಾಡಲಿಕ್ಕೆ ಸಾಧ್ಯವಿಲ್ಲದೇ ಇದ್ದಾಗ ಖಾಸಗಿಯವರು ಕೇಳಿದಷ್ಟು ಹಣ ಕೊಟ್ಟು ಮಕ್ಕಳನ್ನು ಸೇರಿಸಬೇಕಾದಂಥ ಸ್ಥಿತಿ ಬಂದಿರುವಂತಾದ್ದು. ಈ ಕಾರಣಕ್ಕಾಗಿಯೇ ನಮ್ಮ ಅವಶ್ಯಕತೆಯಿಂದಾಗಿಯೇ ಶೋಷಣೆ ಪ್ರಾರಂಭವಾಯಿತು. ಈ ಮೂಲಭೂತ ವಿಚಾರದ ಬಗ್ಗೆ ನೀವು ಯೋಚನೆ ಮಾಡದೆ ಇರುವ ವ್ಯವಸ್ಥೆಯನ್ನೇ ಮುಂದುವರೆಸುವುದಾದರೆ ಏನು ಪ್ರಯೋಜನ ಆಯಿತು ? ಅದಕ್ಕೋಸ್ಕರ ಇದು ದ್ರಾವಿಡ ಪ್ರಾಣಾಯಾಮ ಎಂದು ನಾನು ಹೇಳುವುದಕ್ಕೆ ಕಾರಣ.

ಮತ್ತೆ ಎರಡನೇ ಚಾಪ್ಟರ್‌ನಲ್ಲಿ ಶಿಕ್ಷಣ ಪ್ರಾಧಿಕಾರಿಗಳು – ಇದರಲ್ಲಿ ಇರತಕ್ಕಂಥ ಲೋಪದೋಷಗಳನ್ನು ನಾನು ಪ್ರಸ್ತಾಪಮಾಡುತ್ತಾ ಹೋಗುತ್ತೇನೆ. ಇದರಲ್ಲಿ—

> ......"ರಾಜ್ಯ ಸರ್ಕಾರವು, ಶಿಕ್ಷಣದ ಹಲವಾರು ಇಲಾಖೆಗಳೊಡನೆ ವ್ಯವಹರಿಸಲು ಅವಶ್ಯವೆಂದು ತಾನು ಭಾವಿಸುವಷ್ಟು ಸಂಖ್ಯೆಯ ಇಲಾಖೆಗಳನ್ನು ರಚಿಸತಕ್ಕದ್ದು ಮತ್ತು ಪ್ರತಿ ಇಲಾಖೆಗೆ ಅಥವಾ ಇಲಾಖೆಗಳ ಗುಂಪಿಗೆ ನಿರ್ದೇಶಕರನ್ನು ಅಥವಾ ಕಮೀಶನರನ್ನು ನೇಮಕ ಮಾಡತಕ್ಕದ್ದು......"

ಮುಂದೆ ಹೇಳಿದ್ದಾರೆ—

> "..... ಪ್ರತಿಯೊಬ್ಬ ನಿರ್ದೇಶಕರು ತಮಗೆ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಲು ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ವಹಿಸಲಾದ ಕರ್ತವ್ಯಗಳನ್ನು ನಿರ್ವಹಿಸಲು ಸಹಾಯಕವಾಗುವಂತೆ, ಅಡಿಶನಲ್ ನಿರ್ದೇಶಕರು, ಜಂಟಿ ನಿರ್ದೇಶಕರು ಹಾಗೂ ಉಪ ನಿರ್ದೇಶಕರನ್ನಾಗಿ ಅಥವಾ ಅವಶ್ಯವಿರಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಸಹ ನೇಮಕ ಮಾಡಿಕೊಳ್ಳಬಹುದು"

ಇದರಿಂದ ಏನು ಆಗುತ್ತದೆ ಎಂದರೆ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗುವುದೇ ಹೊರತು ಫೈಲುಗಳು ಹೆಚ್ಚು ಆಗುವುದೇ ಹೊರತು, ಬೇರೇನೂ ಆಗುವುದಿಲ್ಲ. ಅಧಿಕಾರ ವಿಕೇಂದ್ರೀಕರಣ ನಮ್ಮ ಧ್ಯೇಯವೆಂದು ಹೇಳುವಾಗ, ಇಂತಿಂಥ ವಿಷಯಗಳು ಇಂತಿಂಥವರ ಮಟ್ಟದಲ್ಲಿ ತೀರ್ಮಾನವಾಗತಕ್ಕದ್ದು, ಇಂತಿಂಥಾದ್ದು ಉಪನಿರ್ದೇಶಕರ ಲೆವಲ್‌ನಲ್ಲಿ ತೀರ್ಮಾನವಾಗತಕ್ಕದ್ದು ಎಂದಾಗಲೀ ಈ ರೀತಿಯ ತೀರ್ಮಾನವನ್ನು ಇದರಲ್ಲಿ ಮಾಡಿಲ್ಲ.

ಶ್ರೀ ಬಿ. ರಾಚಯ್ಯ.— ಅದೆಲ್ಲಾ ರೂಲ್ಸ್‌ನಲ್ಲಿ ಬರುತ್ತದೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.— ಇಲಾಖೆಯನ್ನು ಸಾಕಷ್ಟು ದೊಡ್ಡದು ಮಾಡಿ ನಿರ್ದೇಶಕರು ಎಂದು ಬೋರ್ಡು ಹಾಕಿ, ಉಪ ನಿರ್ದೇಶಕರು ಎಂದು ಬೋರ್ಡು ಹಾಕಿ ಸುಧಾರಣೆ ಮಾಡುತ್ತೇವೆ ಎಂದು ಹೇಳಿದರೆ, ಅಷ್ಟರಿಂದಲೇ ಸುಧಾರಣೆ ಆಗುತ್ತದೆ ಎಂದು ತಾವು ಸಮಾಧಾನಪಟ್ಟುಕೊಳ್ಳಬೇಕಾಗುತ್ತದೆ ಎಂದು ನಾನು ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಮತ್ತೆ ಇಲ್ಲಿ ಶೈಕ್ಷಣಿಕ ಸಂಸ್ಥೆಗಳ ವರ್ಗೀಕರಣ ಮತ್ತು ನೋಂದಣಿಯ ಬಗ್ಗೆ ಹೇಳಿದ್ದಾರೆ. ನೋಂದಣಿ ಮಾಡುವಾಗ ಅವರು ಕೆಲವು ನಿಯಮಗಳನ್ನು ಪಾಲನೆ ಮಾಡಬೇಕು.

"........ಕಟ್ಟಡ ನಿರ್ಮಾಣಕ್ಕಾಗಿರುವ ನಿವೇಶನ, ಒದಗಿಸಲು ಉದ್ದೇಶಿಸಲಾದ ಆಟದ ಮೈದಾನ ಹಾಗೂ ಉದ್ಯಾನವನ ಮತ್ತು ಸಂಸ್ಥೆಯನ್ನು ಪ್ರಾರಂಭಿಸಲು ಉದ್ದೇಶಿಸಲಾದ ಕಟ್ಟಡ ಇವು ಅವುಗಳಿಗಾಗಿ ಗೊತ್ತುಪಡಿಸಲಾದ ನಿಯಮಗಳಿಗನುಸಾರವಾಗಿದೆಯೇ ಎಂಬ ಬಗ್ಗೆ—"

ಜೋಗ್‌ದಲ್ಲಿ ಕ್ರಿಶ್ಚಿಯನ್ ಮೆಶಿನರಿಯವರು ನಡೆಸುತ್ತಿರುವ ಒಂದು ಸಂಸ್ಥೆಯಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ನಡೆಸುತ್ತಿದ್ದಾರೆ. ಆ ಸಂಸ್ಥೆಯ ಪಕ್ಕದಲ್ಲಿ ಜಾಗ ಇದೆ. ಅಲ್ಲಿ ಆಟದ ಮೈದಾನ ಕಟ್ಟುತ್ತೇವೆ ಎಂದು ಹೇಳಿದರೆ ಇವತ್ತಿನವರೆಗೂ ಕೊಡುವಂತಹ ಕೆಲಸ ಮಾಡಿಲ್ಲ. ಆಟದ ಮೈದಾನಗಳನ್ನು ಮಾಡಲು ಸರ್ಕಾರದ ಸಹಾಯ ಕೂಡ ಬೇಕಾಗುತ್ತದೆ. ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಮಾಡಿ ಅವರ ಮೇಲೆ ಇದರ ಬಗ್ಗೆ ಒತ್ತಡ ಹಾಕಿದರೆ ಆ ಸಂಸ್ಥೆ ಮುಚ್ಚಿಹೋಗಬಹುದು. ಆದ್ದರಿಂದ ಆಯಾ ಹಂತದ ಶಾಲೆಗಳು, ಪ್ರಾಥಮಿಕ ಶಾಲೆಗಳಿಗೆ ಇಷ್ಟು ಆಟದ ಮೈದಾನ ಇರಬೇಕು, ಪ್ರೌಢಶಾಲೆಗೆ ಇಷ್ಟು ಆಟದ ಮೈದಾನ ಇರಬೇಕು, ಪದವಿ ಶಾಲೆಗೆ ಇಷ್ಟು ಆಟದ ಮೈದಾನ ಇರಬೇಕು ಎನ್ನುವ ನಿರ್ದಿಷ್ಟ ಕ್ರಮವನ್ನು ಏತಕ್ಕೆ ತೆಗೆದುಕೊಳ್ಳಬಾರದು ? ವಿದ್ಯಾಸಂಸ್ಥೆಗಳು ಇದ್ದರೆ ಅವುಗಳ ಪಕ್ಕದಲ್ಲಿ ಜಾಗ ಇದ್ದರೆ ಅದನ್ನು ಆಟದ ಮೈದಾರದ ಉಪಯೋಗಕ್ಕೆ ಬರುವಂತೆ ಅದನ್ನು ಕಾದಿಡಬೇಕು. ಅಂತಹ ಶಾಲೆಗಳ ಪಕ್ಕದಲ್ಲಿ ಸ್ವಲ್ಪ ಜಾಗಯಿದ್ದರೆ, ಖಾಸಗಿಯವರು ಬೇರೆ ಯಾರಿಗಾದರೂ ಕೊಡುತ್ತಾರೆಯೇ ಹೊರತು, ಸರ್ಕಾರದ ಈ ಶಾಲೆಗಳ ಉಪಯೋಗಕ್ಕೆ ಅವು ಸಿಗುತ್ತಿಲ್ಲ. ನಾವೇನು ನಾಳಿನ ಪ್ರಜೆಗಳು ತಯಾರಾಗಬೇಕು, ದೇಶದ ಭವಿಷ್ಯ ಮಕ್ಕಳನ್ನು ಅವಲಂಬಿಸಿದೆ ಎಂದೆಲ್ಲಾ ಮಾತನಾಡುತ್ತೇವೆ. ಆದರೆ ಅದಕ್ಕಾಗಿ ನಿಜವಾದ ಪ್ರಾಮಾಣಿಕ ಪ್ರಯತ್ನ ಮಾಡುವ ದಿಸೆಯಲ್ಲಿ ಇದು ನಡೆದಿಲ್ಲ. ಮುಂದೆ ಕೂಡ ಮೂಲಭೂತವಾದ ಈ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇನ್ನೂ ಕೂಡ ಎಲ್ಲಾ ಕಡೆಗಳಲ್ಲಿ ಶಾಲೆಗಳನ್ನು ಮಾಡಿ ತಾಂತ್ರಿಕ ವಿದ್ಯಾಭ್ಯಾಸ ಕೊಡುವುದಕ್ಕೆ ಕಷ್ಟವಾಗಿದೆಯೆಂದರೆ ಈ ಖಾಸಗಿ ವಿದ್ಯಾಭ್ಯಾಸ ವ್ಯವಸ್ಥೆಯನ್ನು ಒಪ್ಪುತ್ತೇವೆ ಎಂದು ಇದರಲ್ಲಿ ಒಪ್ಪಿಕೊಂಡಹಾಗೆ ಆಗುತ್ತದೆ.

3-30 p. m.

ಹಾಗೆ ಹೇಳಿಕೊಂಡಾಗ ಖಾಸಗಿ ವ್ಯವಸ್ಥೆಯಲ್ಲಿ ಸರಿಯಾಗಿ ನಡೆಯುವಂತೆ ನೋಡಬೇಕು ಖಾಸಗಿ ವ್ಯವಸ್ಥೆಯಲ್ಲೂ ಕೂಡಾ ಯಾರು ಸ್ವಲ್ಪ ಪ್ರಭಾವವುಳ್ಳವರು ಇರುತ್ತಾರೋ ಅವರದು ನಡೆಯುತ್ತದೆ. ಆದರೆ ಪ್ರಭಾವ ಇಲ್ಲದಿದ್ದವರು ಸಿಕ್ಕಿಹಾಕಿಕೊಳ್ಳುವ ರೀತಿಯಲ್ಲಿದೆ. ಆದುದರಿಂದ ಈ ಕಾನೂನಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡುವ ಅಗತ್ಯವಿದೆ ಎಂಬುದನ್ನು ನಾನು ಈ ಸರ್ಕಾರದ ಗಮನಕ್ಕೆ ತರುವುದಕ್ಕೆ ಎದ್ದು ನಿಂತಿದ್ದೇನೆ. ಮತ್ತು ಇದರಲ್ಲಿ ಏನು ಹೇಳಿದ್ದೀರಿ ಎಂದರೆ ಮೂರು ತಿಂಗಳ ಒಳಗೆ ಉತ್ತರ ಕೊಡಬೇಕು ಎಂದು ಹೇಳಿದ್ದೀರಿ. ಚಾಪ್ಟರ್ ಐದರಲ್ಲಿ ನೋಂದಣಿ ಪ್ರಾಧಿಕಾರವು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಒಳಗೆ ನೋಂದಣಿ ಮಾಡಲು ಅಥವಾ (3)ನೇ ಉಪ ಪ್ರಕರಣದ ಮೇರೆಗಿನ ಪಾಲನಾ ಅವಧಿಯನ್ನು ನಿರ್ದಿಷ್ಟಪಡಿಸಲು ಅಥವಾ ವಿಸ್ತರಿಸಲು ತಪ್ಪಿದಾಗ ಸಂಸ್ಥೆಯ ನೋಂದಣಿಯನ್ನು ನಿರಾಕರಿಸಲಾಗಿದೆಯೆಂದು ಭಾವಿಸತಕ್ಕದ್ದು. ಇದು ಏನಾಗುತ್ತದೆಂದರೆ ಈಗಾಗಲೇ ಹೇಳಿದ ಹಾಗೆ ಕೆಲವು ಕಡೆ ಇರತಕ್ಕ ಖಾಸಗಿ ಶಾಲೆಗಳ ಬಗ್ಗೆ ಹೇಳುವುದಾದರೆ ಕೆಲವು ಸಂಸ್ಥೆಗಳು ಬೇರೆ ಯಾವ ರೀತಿಯ ಲಾಭಕ್ಕಾಗಿ ಮಾಡುತ್ತಿಲ್ಲ. ಆದರೆ ಕೆಲವು ಸಂಸ್ಥೆಗಳು ಬರೀ ಲಾಭಕ್ಕಾಗಿ ಮಾಡುವಂತಹ ಕೆಲವೊಂದು ಖಾಸಗಿ ಸಂಸ್ಥೆಗಳು ಇವೆ. ಅವರು ತಮ್ಮ ಸ್ವಾರ್ಥಕ್ಕಾಗಿ ಇಟ್ಟುಕೊಂಡಿದ್ದಾರೆ. ಆದರೆ ತೀರ ಕನಿಷ್ಠ ಆಗತ್ಯವನ್ನು ಪೂರೈಸುವುದಕ್ಕೋಸ್ಕರ ಇರುವಂತಹ ಕೆಲವೊಂದು ಸಂಸ್ಥೆಗಳಿಗೆ ಇದರಿಂದ ದೊಡ್ಡ ತಿರುಗಾಟ ಆಗುತ್ತದೆ. ನಾವು ಹಾವು ಮತ್ತು ಏಣಿ ಆಟವನ್ನು ನೋಡಿರುತ್ತೇವೆ. ಇದರಲ್ಲಿ ಏಣಿಯಲ್ಲಿ ಒಂದೊಂದೇ ಮೆಟ್ಟಿಲನ್ನು ಹತ್ತಿಸಿಕೊಂಡು ಬರಬೇಕಾದರೆ ಹಾವಿನ ಬಾಯಿಗೆ ಸಿಕ್ಕಿಕೊಂಡರು ಅಂದರೆ ಆ ಭೂಪಟದ ಕೆಳಗೆ ಹೋಗುತ್ತದೆ. ಈ ರೀತಿ ಫೈಲುಗಳ ತಿರುಗಾಟ ಪ್ರಾರಂಭವಾಗುತ್ತದೆ. ಈ ಫೈಲುಗಳ ತಿರುಗಾಟ ಪ್ರಾರಂಭಿಸುವ ಬಗ್ಗೆ ಸಂಬಂಧಪಟ್ಟ ಅಧಕಾರಿಗಳು ಅಷ್ಟೇ ಅಲ್ಲ, ಇಲಾಖೆಯ ಅಧಿಕಾರಿಗಳು ಇದಕ್ಕೆ ಬೇಕಾದಂಥ ವ್ಯವಸ್ಥೆಯನ್ನು ಮಾಡುವಾಗ ಅಲ್ಲಿ ಒಂದು ಶಬ್ದ ಹಾಕಿ ಎಂದು ನಾನು ಸೂಚಿಸಬಯಸುತ್ತೇನೆ. ಅದು ಏನು ಅಂದರೆ........

ವೈಸ್ ಛೇರ್‌ಮನ್.— ಕ್ಲಾಸ್ ಯಾವುದು ?

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.— ನೋಂದಣಿ ಮಾಡುವಾಗ ಮೂರು ತಿಂಗಳ ಒಳಗೆ ನೋಂದಣಿ ಮಾಡಬೇಕು. ಅಥವಾ ಅವಧಿ ವಿಸ್ತರಿಸಬೇಕು. ಅದು ಇಲ್ಲದಿದ್ದರೆ ಸಂಸ್ಥೆ ನೋಂದಣಿ ನಿರಾಕರಿಸಲ್ಪಟ್ಟಿದೆ ಅಂತ ತಿಳಿದುಕೊಳ್ಳಬೇಕು ಎಂದು ಇದೆಯೆಲ್ಲಾ ಇದು ಯಾವ ನ್ಯಾಯ ಸ್ವಾಮಿ ? ನಿಮಗೆ ನಿಜವಾದ ಉದ್ದೇಶವಿದ್ದರೆ, ಮೂರು ತಿಂಗಳ ಒಳಗೆ ಉತ್ತರ ಬರದಿದ್ದಲ್ಲಿ ಆಮೇಲೆ ನಿಜವಾಗಿ ನಿಯಮಾನುಸಾರವಾಗಿ ಸಂಸ್ಥೆ ಇಲ್ಲ ಅಂತ ಸ್ಪಷ್ಟಪಡಿಸದಿದ್ದಲ್ಲಿ ನೋಂದಣಿಯಾಗಿದೆಯೆಂದು ತಿಳಿದು ಕೊಳ್ಳಬೇಕು ಎಂದು ಅದರಲ್ಲಿ ಸೇರಿಸಿ. ನೋಂದಣಿ ಆಗಿಲ್ಲವೆಂದು ಏಕೆ ಹಾಕುತ್ತೀರಾ ? ಅಲ್ಲಿ ತಪ್ಪಿ ತಸ್ಥರು ಯಾರು ? ನಿಮ್ಮ ಆಡಳಿತ ವ್ಯವಸ್ಥೆಯಲ್ಲಿ ತಪ್ಪು ಇರಬಹುದು ಇದನ್ನು ಏತಕ್ಕೋಸ್ಕರವಾಗಿ ಹೇಳಬೇಕಾಗಿ ಬಂತು ಎಂದರೆ ಪ್ರೌಢಶಾಲೆಗಳು ಖಾಸಗಿಯಾಗಿ ಮಾಡುವಾಗ ಈ ತೊಂದರೆ ಬರುತ್ತದೆ. ಕೆಲವು ಸಲ ಕೊಟ್ಟಂತಹ ಅರ್ಜಿ ಎಲ್ಲೆಲ್ಲೋ ಹೋಗಿ ಆರು ತಿಂಗಳಾದರೂ ಎಜುಕೇಷನ್ ಸೊಸೈಟಿ ರಿಜಿಸ್ಟರ್ಡ್ ಆಗುವುದಿಲ್ಲ. ಒಂದೊಂದು ವರ್ಷವೂ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಅಂಥ ಸಂದರ್ಭ ಇರುವುದಕ್ಕಾಗಿ ನೀವು ಒಂದು ನೋಂದಣಿಗೆ ಅರ್ಜಿ ಹಾಕಿಕೊಂಡಾಗ ಇದಕ್ಕೆ ನಿಯಮಾವಳಿ ಯಾವುದೆಂಬುದನ್ನು ಕೂಡಲೇ ಅವರಿಗೆ ಉತ್ತರ ಕೊಡಬೇಕು. ಅವರು ಉತ್ತರ ಕೊಡಬೇಕು ಎಂದು ಮಾಡಿದರೆ ನಿಯಮಕ್ಕೆ ಅನುಸಾರವಾಗಿ ಪೂರೈಸಿಕೊಡಬೇಕು. ಆ ರೀತಿ ಪೂರೈಸಿದ ನಂತರ ಅವರಿಗೆ ಮೂರು ತಿಂಗಳೊಳಗಾಗಿ ಸರ್ಕಾರದ ಕಡೆಯಿಂದ ಅಥವಾ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಕಡೆಯಿಂದ ನಿರ್ದಿಷ್ಟವಾದ ಸೂಚನೆ ಇಲ್ಲದಿದ್ದರೆ ನೋಂದಣಿಯಾಗಿದೆಯೆಂದು ತಿಳಿದುಕೊಳ್ಳಬೇಕೆನ್ನುವುದನ್ನು ಇದರಲ್ಲಿ ಅಡಕ ಮಾಡುವುದು ಅವಶ್ಯಕವೆನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಆಮೇಲೆ 6ನೇ ಚಾಪ್ಟರ್‌ನಲ್ಲಿ ಸೆಕ್ಷನ್ 39(3)ರಲ್ಲಿ ಹಿಂತೆಗೆದುಕೊಳ್ಳಲಾಗಿದೆಯೆಂದಿದೆ. ಇದರಲ್ಲಿ ವ್ಯಾಸಂಗ ಕ್ರಮದಲ್ಲಿ ವಿಶ್ವವಿದ್ಯಾನಿಲಯವು ಅಥವಾ ಸರ್ಕಾರ ನಡೆಸುವ ಪರೀಕ್ಷೆಗಳಿಗೆ ಅಭ್ಯರ್ಥಿಗಳನ್ನು ಕಳುಹಿಸುವುದಕ್ಕೆ ಅಥವಾ ಹಾಜರುಪಡಿರುವುದಕ್ಕೆ ಎಂದು ಹೀಗೆ ಇರತಕ್ಕದ್ದು ಎಂದು ಹೇಳಿದ್ದೀರಾ ? ಅಂದರೆ ಸರ್ಕಾರದಲ್ಲಿ ಯಾವ ರೀತಿಯ ಕಾನೂನು ಇದೆ, ಆ ಕಾನೂನಿಗೆ ಒಳಪಟ್ಟಿರದ ಯಾವುದೇ ಶಿಕ್ಷಣ ಸಂಸ್ಥೆಗೆ ಈ ಸಹಾಯ ಧನ ಕೊಡುವುದಿಲ್ಲವೆಂದು ಹೇಳಿದ್ದೀರಾ, ಇದಕ್ಕೆ ಏನು ತೊಂದರೆ ಇಲ್ಲ ? ಏಕೆ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಅಂದರೆ ಈ ವಿದ್ಯಾರ್ಥಿಗಳು ಏನು ತಪ್ಪು ಮಾಡಿದ್ದಾರೆ ? ಅವರು ನೋಂದಣಿ ರಿಜಿಸ್ಟ್ರೇಷನ್ ಪಡಿಸುವಂತಹ ಸಂದರ್ಭದಲ್ಲಿ ತಪ್ಪಾಗಿದ್ದರೆ ಅದು ಯಾರಿಂದ ತಪ್ಪಾಗುತ್ತದೆ ? ತಪ್ಪಾಗಿದ್ದರೆ ಅದು ಈ ಒಂದು ಆಡಳಿತವನ್ನು ನಡೆಸುವಂಥ ಆಡಳಿತ ಮಂಡಳಿಗಳಲ್ಲಿ ತಪ್ಪಾಗಿರುತ್ತದೆ. ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ಅವರ ಮೇಲೆ ಬೇಕಾದರೆ ತೆಗೆದುಕೊಳ್ಳಿ. ಈ ತರಹ ಕ್ರಮ ತೆಗೆದುಕೊಳ್ಳುವಾಗ ಯಾವುದೇ ಸಂಸ್ಥೆಯ ನೋಂದಣಿಯನ್ನು ರದ್ದುಪಡಿಸುವಾಗ ಒಂದು ಎಚ್ಚರಿಕೆಯನ್ನು ಏನು ಇಟ್ಟುಕೊಳ್ಳಬೇಕಾಗುತ್ತದೆಂದರೆ ಅಲ್ಲಿರತಕ್ಕಂಥ ವಿದ್ಯಾರ್ಥಿಗಳಿಗೆ ಅವರು ಮುಂದಿನ ತರಗತಿಗಳಿಗೆ ಹೋಗುವುದಕ್ಕೆ ಯಾವುದೇ ರೀತಿಯ ತೊಂದರೆಯಾಗಬಾರದು. ಜೊತೆಯಲ್ಲಿ ನೋಂದಣಿ ರದ್ದುಪಡಿಸಿದರೆ ಎಷ್ಟೋ ಕಾಲದಿಂದ ಸೇವೆಮಾಡಿಕೊಂಡು ಬಂದಿರತಕ್ಕ ಶಿಕ್ಷಕರಿಗೂ ಕೂಡಾ ತೊಂದರೆಯಾಗಬಾರದು. ಇದನ್ನು ಗಮನದಲ್ಲಿಟ್ಟುಕೊಂಡು ಈ ವಿಷಯದಲ್ಲಿ ಒಂದು ನಿಯಮಾವಳಿಯನ್ನು ಅಳವಡಿಸಬೇಕೆಂಬ ಮಾತನ್ನು ಹೇಳುತ್ತೇನೆ.

ಆಮೇಲೆ 7ನೇ ಚಾಪ್ಟರ್‌ನಲ್ಲಿ ಸೆಕ್ಷನ್ 43(1)ರಲ್ಲಿ ಕಾರ್ಯದರ್ಶಿಗಳನ್ನು ನೇಮಕಮಾಡಿಕೊಳ್ಳುವುದು ಎಂದು ಹೇಳಿರುವುದರಲ್ಲಿ ವಿದ್ಯಾಸಂಸ್ಥೆಯ ಮುಖ್ಯಸ್ಥರಲ್ಲಿ ಇತರೆ ಕೆಲವು ನೌಕರರಲ್ಲಿ ಆ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡತಕ್ಕದ್ದಲ್ಲ ಎಂದು ಹೇಳಿದ್ದಾರೆ. ಇದನ್ನು ಹೀಗೆ ಹೇಳುವುದರ ಬದಲಾಗಿ ವಿದ್ಯಾ ಸಂಸ್ಥೆಯಲ್ಲಿ ಅಂದರೆ ಶಿಕ್ಷಕರಲ್ಲಿ ಯಾರನ್ನಾದರೂ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳಬೇಕು ಅಂತ ಇದ್ದರೆ ಅಂಥ ಸಂದರ್ಭದಲ್ಲಿ ಆ ಒಂದು ವಿದ್ಯಾಸಂಸ್ಥೆಯ ಶಿಕ್ಷಕರಲ್ಲಿ ಅಥವಾ ನೌಕರರಲ್ಲಿ ಒಬ್ಬರನ್ನು ಕಾರ್ಯದರ್ಶಿಯಾಗಿ ಮಾಡುವ ಸಂದರ್ಭದಲ್ಲಿ ಇವರ ಮುಖ್ಯಸ್ಥರಲ್ಲಿ ಒಬ್ಬರನ್ನು ಕಾರ್ಯದರ್ಶಿಯನ್ನಾಗಿ ಮಾಡಬಹುದು ಎನ್ನುವುದನ್ನು ತಾವು ಅಳವಡಿಸಬೇಕೆಂದು ನಾನು ಸೂಚಿಸಬಯಸುತ್ತೇನೆ. ಇಲ್ಲಿ ಕಾರ್ಯದರ್ಶಿಯನ್ನು ತೆಗೆದುಹಾಕುವುದರಲ್ಲಿ ಅದು ಇದೆ. ಯಾವರೀತಿಯಿಂದ ನೇಮಕಮಾಡುವಂಥಾದ್ದು ಮತ್ತು ತೆಗೆದುಹಾಕುವಂಥಾದ್ದು ಇದೆ. ಆದರೆ ಸರ್ಕಾರದ ಅನುದಾನ ಇಲ್ಲದೆ ನಡೆಸುವಂಥ ಕೆಲವು ಶಿಕ್ಷಣ ಸಂಸ್ಥೆಗಳವರು ಪೂರ್ತಿಯಾಗಿ, ಧಾರ್ಮಿಕವಾಗಿ ಅನೇಕ ಶಾಲೆಗಳನ್ನು ನಡೆಸುವವರಿದ್ದಾರೆ. ಅವೆಲ್ಲವನ್ನೂ ಒಂದೇ ಎಂದು ಹೇಳುವಂಥ ಪ್ರಸಂಗ ಬರುವುದಿಲ್ಲ. ಶೋಷಣೆ ಮಾಡುವಂಥ ಶಾಲೆಗಳೂ ಇವೆ. ಶೋಷಣೆ ಇಲ್ಲದೆ ಪೂರ್ತಿ ಧಾರ್ಮಿಕವಾಗಿ ಮತ್ತೊಂದು ಒಳ್ಳೆಯ ಘನವಾದ ಉದ್ದೇಶ ಇಟ್ಟುಕೊಂಡು ನಡಸುವಂಥ ವ್ಯಕ್ತಿಗಳ ಸಂಸ್ಥೆಗಳೂ ಕೂಡಾ ಇವೆ. ಇಂಥ ಸಂದರ್ಭದಲ್ಲಿ ಸೆಕ್ರೆಟರಿಗಳನ್ನು ತೆಗೆದುಹಾಕಬೇಕೆನ್ನುವ ನಿರ್ಧಾರವನ್ನು ಕೊಡುವಂಥ ಒಂದು ಕ್ರಮದಲ್ಲಿ

ಇದೆ. ನೇಮಕಾತಿಯಲ್ಲೂ ಆ ರೀತಿ ಮಾಡುವುದು, ಮತ್ತೆ ತೆಗೆದುಹಾಕುವುದರಲ್ಲೂ ಕೂಡ ಸರಿಯಲ್ಲವೆನ್ನುವುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಅಧ್ಯಾಯ (8)ರಲ್ಲಿ ಶುಲ್ಕಗಳನ್ನು ಯಾವ ರೀತಿ ಹಾಕಬೇಕೆಂಬುದು ಇದೆ. ಮಾನ್ಯತೆ ಪಡೆದ ಯಾವುದೇ ಶಿಕ್ಷಣ ಸಂಸ್ಥೆಯ ಆಡಳಿತ ವರ್ಗವು ನಿರ್ದಿಷ್ಟಪಡಿಸಬಹುದಾದಂಥ ದರದಲ್ಲಿಲ್ಲದ ಹಾಗೂ ನಿರ್ಧಿಷ್ಟಪಡಿಸಬಹುದಾದಂಥ ರೀತಿಯಲ್ಲಿಲ್ಲದ ಯಾವುದೇ ಶುಲ್ಕಗಳು, ಅಥವಾ ಚಾರ್ಜುಗಳನ್ನು ಅಥವಾ ವಂತಿಗೆಗಳನ್ನು ಅಥವಾ ಇತರ ಸಂದಾಯಗಳನ್ನು ಅವುಗಳನ್ನು ಯಾವು ಹೆಸರಿನಿಂದ ಕರೆದರೂ ಸರಿಯೇ ವಿಧಿಸತಕ್ಕದ್ದಲ್ಲ ಹಾಗೂ ವಸೂಲ್ಮಾಡತಕ್ಕದಲ್ಲ.

ಈ ಜವಾಬ್ದಾರಿಯನ್ನು ಆಯಾಯ ಸಂಸ್ಥೆಗಳಿಗೆ ವಹಿಸಿದ್ದರೂ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರ ಸೂಕ್ತ ವ್ಯವಸ್ಥೆ ಮಾಡಬೇಕು. ನಾನು ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಹೇಳುತ್ತಿದ್ದೇನೆ. ಪ್ರೌಢಶಾಲೆಯಲ್ಲಿ ಶಿಕ್ಷಣ ಕೊಡಬೇಕೆಂದರೆ ಆ ಶಿಕ್ಷಣ ಸಂಸ್ಥೆ ಅವಶ್ಯಕತೆಗಳಿಗೆ ಅನುಸಾರವಾಗಿದೆಯೋ ಇಲ್ಲವೇ ಎಂಬುದನ್ನು ನೋಡಬೇಕು. ಯಾರು ಬಡವರು ಇದ್ದಾರೆ ಅವರಿಂದ ಶುಲ್ಕ ವಸೂಲು ಮಾಡುವ ಬಗ್ಗೆ ನಿಗಾ ಇಡಬೇಕು. ಕೆಲವು ಕಡೆ ಅನುಕೂಲವಿದ್ದರೂ ಕೂಡ ಶುಲ್ಕ ಕೊಡುವುದಕ್ಕೆ ಹಿಂದುಮುಂದು ನೋಡುತ್ತಾರೆ. ನಮ್ಮ ಊರಿನಲ್ಲಿ ಆಗತಕ್ಕ ಪ್ರೌಢಶಾಲೆಗೆ ಧನ ಸಹಾಯ ಮಾಡಿ ಎಂದರೂ ಯಾರೂ ಕೊಡ ಮುಂದೆ ಬರುವುದಿಲ್ಲ. ಆದರೆ ಅವರ ಮಕ್ಕಳಿಗೆಲ್ಲಾ ಪುಕ್ಕಟೆ ವಿದ್ಯಾಭ್ಯಾಸ ದೊರೆಯಬೇಕು. ನಮ್ಮ ಸಾಗರದಲ್ಲಿ ಪಸ್ಟ್‌ಗ್ರೇಡ್ ಕಾಲೇಜು ಮಾಡಿದರೆ, ಕಾಲೇಜು ಪಕ್ಕದಲ್ಲಿರತಕ್ಕ ಅನುಕೂಲಸ್ಥ ಕುಟುಂಬದವರು ಸಹ ದೇಣಿಗೆ ಕೊಡುವುದಿಲ್ಲ. ಇವರಿಗೆಲ್ಲಾ ಪುಕ್ಕಟೆ ವಿದ್ಯಾಭ್ಯಾಸ ದೊರೆಯಬೇಕು. ಇಂಥಾ ಸ್ಥಿತಿ ಇರುವಾಗ ಈ ಒಂದು ನಿಯಮವನ್ನು ಎಲ್ಲದಕ್ಕೂ ಒಂದೇ ಮಾಡಬೇಡಿ. ಬೆಂಗಳೂರಿನಲ್ಲಿಲತಕ್ಕ ಖಾಸಗೀ ಸಂಸ್ಥೆಗೂ ಒಂದೇ, ಮಲೆನಾಡಿನ ಮೂಲೆಯಲ್ಲಿರತಕ್ಕ ಖಾಸಗೀ ಸಂಸ್ಥೆಗೂ ಒಂದೇ, ಮೆಡಿಕಲ್–ಇಂಜಿಯರಿಂಗ್ ಕಾಲೇಜುಗಳನ್ನು ನಡೆಸತಕ್ಕ ಸಂಸ್ಥೆಗೂ ಒಂದೇ ; ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪ್ರೌಢಶಾಲೆಗಳಿಗೆ ಒಂದೇ ಎಂಬ ನಿಯಮವನ್ನು ತಾವು ತರಬಾರದು. ಏತಕ್ಕೆಂದರೆ ನಗರ ಪ್ರದೇಶಗಳಲ್ಲಾದರೆ ಶಾಲಾ ಕಟ್ಟಡಗಳನ್ನು ಸರ್ಕಾರವೇ ನೇರವಾಗಿ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ, ಮತ್ತು ಅವಕ್ಕೆ ಬೇಕಾದ ಪೀಠೋಪಕರಣಗಳನ್ನು ಕೊಂಡು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮೇಲಾಗಿ ಇಲ್ಲಿ ಹೆಚ್ಚು ದೇಣಿಗೆಯನ್ನು ವಸೂಲು ಮಾಡುವ ಅವಕಾಶ ಕೂಡ ಇರುತ್ತದೆ. ಇದು ಅಲ್ಲದೆ ಇರುವ ಕಡೆ ಈ ಒಂದು ನಿಯಮದಿಂದ ಬಹಳ ತೊಂದರೆಯಾಗುತ್ತದೆ. ನಾಳೆ ದಿವಸ ಅಂಥಾ ಕಡೆ ಇರತಕ್ಕ ವಿದ್ಯಾ ಸಂಸ್ಥೆಗಳು ನಿಂತುಹೋಗಿ ವಿದ್ಯಾಭ್ಯಾಸದ ಅವಶ್ಯಕತೆ ಪೂರೈಸದೇ ಇರುವ ಸಂದರ್ಭ ಒದಗಬಹುದೆಂದು ಹೇಳುತ್ತೇನೆ.

ಛೇರ್‌ಮನ್.—ದೇಣಿಗೆ ವಸೂಲು ಮಾಡುವುದಕ್ಕೆ ಅವಕಾಶ ಇರಬೇಕು ಅನ್ನುತ್ತೀರಾ ? ಇಲ್ಲಿ ಕಾನೂನಿಗೆ ಒಳಪಟ್ಟು ಇರಬೇಕೆಂದು ಇದೆ. ನಿಮ್ಮ ಅಭಿಪ್ರಾಯದಲ್ಲಿ ಕಾನೂನಿಗೆ ಹೊರತಾಗಿ ಇರಬೇಕು ಅನ್ನುತ್ತೀರಾ ?

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಕಾನೂನಿಗೆ ಒಳಪಟ್ಟು ಅದರಲ್ಲಿ ವ್ಯತ್ಯಾಸ ಇರಬೇಕು. ಇಲ್ಲದಿದ್ದರೆ ಸರ್ಕಾರವೇ ಆ ಜವಾಬ್ದಾರಿಯನ್ನು ವಹಿಸಿಕೊಂಡು ಮಾಡಲಿ ಎಂದು ಮೊದಲೇ ಹೇಳಿದ್ದೇನೆ. ಶಿಕ್ಷಣ ಕ್ಷೇತ್ರದಲ್ಲಿ ಖಾಸಗೀ ವ್ಯವಸ್ಥೆಯನ್ನು ಒಪ್ಪಬೇಡಿ ಎಂದು ಆಗಲೇ ಹೇಳಿದ್ದೇನೆ. ಒಂದು ಪಕ್ಷ ಒಪ್ಪಿಕೊಂಡರೆ ಬೆಂಗಳೂರು ಮುಂತಾದ ನಗರ ಪ್ರದೇಶಗಳಲ್ಲಿರತಕ್ಕ ಶಾಲೆಗಳಿಗೆ ಮತ್ತು ಮಲೆನಾಡಿನ ಮೂಲೆಯಲ್ಲಿರತಕ್ಕ ಶಿಕ್ಷಣ ವ್ಯವಸ್ಥೆಗೂ ಇರತಕ್ಕ ವ್ಯತ್ಯಾಸವನ್ನು ಗಮನಿಸಬೇಕು. ಇಲ್ಲಿ ಪ್ರಾದೇಶಿಕ ಅಸಮಾನತೆ ಇದೆ. ನಮ್ಮ ಕಡೆ ಪ್ರೌಢವಿದ್ಯಾಭ್ಯಾಸ ಸಿಕ್ಕದೇ ಇರುವ ಸ್ಥಿತಿ ಕೂಡ ಇದೆ. ಪದವೀ ಶಿಕ್ಷಣಕ್ಕಂತೂ ನಮ್ಮ ಕಡೆ ತಾಲ್ಲೂಕು ಮಟ್ಟದಲ್ಲಿ ಅನುಕೂಲವಿಲ್ಲ. ಜಿಲ್ಲಾ ಕೇಂದ್ರಕ್ಕೆ ಹೋಗಬೇಕಾದ ಪರಿಸ್ಥಿತಿ ಇದೆ. ಇವತ್ತು ನಾವು ಅದಕ್ಕಿಂತ ಮುಂದೆಹೋಗಬೇಕೆಂದರೆ ಅದಕ್ಕೆ ಸರ್ಕಾರ ವ್ಯವಸ್ಥೆ ಮಾಡದಿದ್ದರೆ ಸಾಧ್ಯವೇ ? ಖಾಸಗೀಯವರು ಭ್ರಷ್ಟಾಚಾರ ಮಾಡಿದರೆ ಸಾಮಾಜಿಕ ನ್ಯಾಯವನ್ನು ಪಾಲಿಸದೇ ಹೋದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಆದರೆ ಆ ಒಂದು ಶಿಕ್ಷಣ ವ್ಯವಸ್ಥೆಯೇ ಇಲ್ಲದಿರುವ ಕಡೆ ಸರಿಯಾದ ರೀತಿಯಲ್ಲಿ ಶಿಕ್ಷಣ ಸೌಲಭ್ಯಗಳ ವ್ಯವಸ್ಥೆ ಮಾಡಿ ಅದಕ್ಕೆ ಏನೇನು ಅವಶ್ಯಕತೆ ಇದೆಯೋ ಅದನ್ನೆಲ್ಲಾ ಕಲ್ಪಿಸಿ ಕೊಡಬೇಕೆಂದು ಹೇಳುತ್ತೇನೆ. ಟ್ರೈಬಲ್ ಬೆನಿಫಿಟ್ ಸ್ಕೀಮ್ ಎಷ್ಟೋ ಪ್ರೌಢಶಾಲೆಗಳಲ್ಲಿ

ಶ್ರೀ ಬಿ. ರಾಚಯ್ಯ.—ಇಂಡಿಯನ್ ಪೀನಲ್ ಕೋಡ್, ಕ್ರಿಮಿನಲ್ ಪ್ರೊಸೀಜರ್ ಕೋಡ್ ಎಲ್ಲಾ ಇರುವುದು ಪ್ರಾಮಾಣಿಕವಾಗಿ ಇರುವವರಿಗೆ ಅಲ್ಲ, ತಪ್ಪು ಮಾಡಿದವರಿಗೆ ಎಂದು ಇರುವುದು. ಹಾಗೆ ಇಲ್ಲಿ ಪೀನಲ್ ಕ್ಲಾಸ್ ಇರುವುದು ತಪ್ಪು ಮಾಡಿದವರಿಗೆ ಮಾತ್ರ.

ಛೇರ್‌ಮನ್.—ಶುಲ್ಕ ವಸೂಲ್ ಮಾಡುವ ಅವಕಾಶ ಕೆಲವು ಕಡೆ ಇರಬೇಕೆಂದು ಹೇಳುತ್ತಾರೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ನಾನು ಮೆಡಿಕಲ್ ಅಥವಾ ಇಂಜಿನಿಯರಿಂಗ್ ಕಾಲೇಜುಗಳ ಬಗ್ಗೆ ಹೇಳುತ್ತಿಲ್ಲ. ಪ್ರೌಢಶಾಲೆಗಳಿಗೆ ಸಂಬಂಧಪಟ್ಟ ಹಾಗೆ ಏತಕ್ಕೆ ಹೇಳಿದೆ ಎಂದರೆ ಅಲ್ಲಿ ಟ್ರಿಬಲ್ ಬೆನಿಫಿಟ್ ಸ್ಕೀಮ್ ಇದೆ. ಖಾಸಗೀ ಪ್ರೌಢಶಾಲೆಗಳು ಹೇಗಾಗಿವೆ ಎಂದರೆ, ಅವಕ್ಕೆ ಬೇಕಾದ ಕಟ್ಟಡ ಗಳನ್ನು ಕಟ್ಟಿಸಿಕೊಡುವವರೆಗೆ ದಾನಿಗಳು ಬಂದರು.

ಶ್ರೀ ಬಿ. ರಾಚಯ್ಯ.—ವಿದ್ಯಾರ್ಥಿಗಳನ್ನು ಶಾಲಾ ಕಾಲೇಜುಗಳಿಗೆ ಸೇರಿಸಿಕೊಳ್ಳುವುದಕ್ಕೆ ಮುಂಚಿತ ವಾಗಿ ಪ್ರವೇಶಕ್ಕೆಂದು ಏನು ಹಣ ತೆಗೆದುಕೊಳ್ಳುತ್ತಾರೆ ಅದನ್ನು ಕಟ್ಟಡಗಳಿಗಾಗಿ ಉಪಯೋಗಿಸ ಬಾರದು. ಶಾಲಾ ಕಟ್ಟಡಗಳಿಗೆ ಮತ್ತು ಕಾಲೇಜು ಕಟ್ಟಡಗಳಿಗೆ ಬೇಕಾದ ವಂತಿಗೆಯನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕು, ತಂದೆ ತಾಯಿಗಳಿಗೂ ಕೂಡ ಮಗನನ್ನು ಶಾಲೆಗೆ ಸೇರಿಸುತ್ತಿದ್ದೇವೆಂಬ ದೃಷಿ ಯಿಂದ ದುಡ್ಡು ಕೊಡಬೇಕಾಗಿದೆ ಎನ್ನುವ ಭಾವನೆ ಇರಬಾರದು. ಶಾಲಾ ಕಟ್ಟಡಕ್ಕೋಸ್ಕರ ಎಂದು ತೆಗೆದುಕೊಳ್ಳುವ ಹಣಕ್ಕೆ ಪ್ರತ್ಯೇಕವಾದ ಲೆಕ್ಕವನ್ನು ಇಡಬೇಕು.

ಛೇರ್‌ಮನ್.—ಅಧ್ಯಾಯ (48)ರಲ್ಲಿ ತೆಗೆದುಕೊಳ್ಳಬಾರದೆಂದಿದೆಯಲ್ಲ ಆ ನಿರ್ಬಂಧವನು ಎಲ್ಲದಕ್ಕೂ ಮಾಡಬಾರದೆಂದು ಹೇಳುತ್ತೇನೆ. ಅದು ಕಾನೂನಿಗೆ ಒಳಪಟ್ಟಿರಬೇಕೆಂದು ಇದೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ನಾನು ಇದನ್ನು ಏತಕ್ಕೆ ಹೇಳಬೇಕಾಯಿತು ಎಂದರೆ ನಮ್ಮ ಕೆಲವು ಪ್ರೌಢಶಾಲೆಗಳಲ್ಲಿ ಟ್ರಿಬಲ್ ಬೆನಿಫಿಟ್ ಸ್ಕೀಮ್ ಇದೆ. ಅದರಿಂದಾಗಿ ಶಿಕ್ಷಕರ ಕೈಯಿಂದ ಹಾಕಿ ಕೊಡಬೇಕಾದ ಪರಿಸ್ಥಿತಿ ಬಂದಿದೆ. ವಿದ್ಯಾರ್ಥಿಗಳು ಏನು ಕೊಡುವ ಹಾಗಿಲ್ಲ. ಕಾನೂನು ಪ್ರಕಾರ ವಸೂಲ್ ಮಾಡುವ ಹಾಗಿಲ್ಲ.

ಛೇರ್‌ಮನ್.—ಆ ರೀತಿ ಅವಕಾಶವಿದ್ದರೆ, ಸ್ವೇಚ್ಛೆಯಾಗಿ ಹಣ ವಸೂಲು ಮಾಡುವ ಪ್ರವೃತ್ತಿ ಯನ್ನು ತಡೆಯುವುದಕ್ಕೋಸ್ಕರ ಇದೆ ಎಂದು ಹೇಳುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಬಡವರಿಗೆ, ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡು ವುದಕ್ಕೋಸ್ಕರವಾಗಿ ಜನಗಳಿಗೆ ತೊಂದರೆ ಕೊಡುವುದು ಬೇಡ. ಪ್ರೌಢಶಾಲೆಯ ಪಕ್ಕದಲ್ಲಿರತಕ್ಕ ಅನುಕೂಲಸ್ಥ ವಿದ್ಯಾರ್ಥಿಗಳೇ ಹಣ ಕೊಡುವುದಕ್ಕೆ ಹಿಂದು ಮುಂದು ನೋಡುತ್ತಾರೆ. ಇದೆಲ್ಲಾ ಯಾರಿಗೆ ಎಂದರೆ, ಯಾರಿಗೆ ಕಾನೂನು ಗೊತ್ತಿದೆ, ಯಾರು ದಬಾವಣೆ ಮಾಡುತ್ತಾರೆ ಅಂಥಹವರು ಪುಕ್ಕಟೆ ಓದುತ್ತಾರೆ. ಯಾರಿಗೆ ಕಾನೂನು ಗೊತ್ತಿಲ್ಲ, ಯಾರಿಗೆ ಇದನ್ನು ಉಪಯೋಗ ಮಾಡಿಕೊಳ್ಳು ತಕ್ಕಂಥ ಚಾತುರ್ಯ ಇಲ್ಲವೋ ಅವರು ವಿದ್ಯೆಯಿಂದ ವಂಚಿತರಾಗುತ್ತಾರೆ. ಅದಕ್ಕೋಸ್ಕರ ಅಧ್ಯಾಯ 48ರಲ್ಲಿ ಏನು ನಿರ್ಭಂಧ ಮಾಡುವುದು ಬೇಡ ಎಂದು ಇದೆ ಇದು ಸರಿಯಾಗಿದೆ. ಇದಕ್ಕೆ ಅವಕಾಶ ಕೊಡಬೇಕೆಂದು ನಾನು ಅವರಿಗೆ ಸೂಚಿಸ ಬಯುಸುತ್ತೇನೆ. ಇನ್ನು 2ನೇ ಉಪಖಂಡದಲ್ಲಿ ಈ ರೀತಿ ಹೇಳಿದೆ.

"(1)ನೇ ಉಪಕರಣದ ಮೇರೆಗೆ ವಿಧಿಸಿದ ಹಾಗೂ ವಸೂಲ್ಮಾಡಿದ ಮೊಬಲಗನ್ನು ಗೊತ್ತು ಪಡಿಸಬಹುದಾದಂಥ ದಂಡ ನಿಯಮಗಳಿಗನುಸಾರವಾಗಿ ಶಿಕ್ಷಣ ಸಂಸ್ಥೆಯು ಉಪಯೋಗಿಸಿ ಕೊಳ್ಳಬಹುದು"

ಶಿಕ್ಷಣದ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಹುದು ಎಂದು ಹಾಕಿದ್ದರೆ ಮುಗಿದ್ದಿತ್ತು. ಮತ್ತೆ ಏನು ನಿಯಮ ಮಾಡುತ್ತೀರಿ ಎಂದು ಕಾಯಬೇಕಾಗಿರಲಿಲ್ಲ. ಇಟ್ಟಂತಹ ಹಣವನ್ನು ಶಿಕ್ಷಣದ ಉದ್ದೇಶ ಕ್ಕಾಗಿ ಉಪಯೋಗಿಸಿದ್ದಾರೋ ಇಲ್ಲವೋ ಎಂಬುದನ್ನು ಕಂಡುಹಿಡಿಯುವುದಕ್ಕೆ ಅಧಿಕಾರಿಗಳು ಇರು ತ್ತಾರೆ. ಆದ್ದರಿಂದ ಶಿಕ್ಷಣದ ಉದ್ದೇಶಕ್ಕಾಗಿ ಇದನ್ನು ಉಪಯೋಗಿಸಿಕೊಳ್ಳಬಹುದೇ ಹೊರತು ಬೇರೆ ಅಲ್ಲ ಎಂದು ಮಾಡಿ. ನಿಗದಿಪಡಿಸಿದ ನಿಯಮಗಳಿಗೆ ಅನುಸಾರವಾಗಿ ಎಂದು ಮಾಡಿ ಇದನ್ನು ನಿಯಮದೊಳಗೆ ತರಬೇಡಿ. ಬುದ್ಧಿವಂತರಾದವರು ಸಂಸ್ಥೆಗಳನ್ನು ಎಚ್ಚರಿಕೆಯಿಂದ ನಡೆಸುತ್ತಾರೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ನಮ್ಮಂತ ದಡ್ಡ ಜನರು ನಡೆಸುವ ಸಂಸ್ಥೆಗಳನ್ನು ಸರಿಯಾಗಿ ನಡೆಸುವುದಕ್ಕೆ ಆಗುವುದಿಲ್ಲ. ಇದರಿಂದ ಅಂಥಾ ಒಂದು ವ್ಯವಸ್ಥೆ ಆಗುತ್ತದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. 9ನೇ ಅಧ್ಯಾಯದಲ್ಲಿ ಆಗಲೇ ಒಂದು ಮಾತು ಹೇಳಿದ ಹಾಗೆ ಎಲ್ಲದಕ್ಕೂ ಸರ್ಕಾರದ ಕಡೆ ನೋಡುವಂತ, ಸರ್ಕಾರಕ್ಕೆ ತಲೆಬಾಗುವಂತ ಸಂಸ್ಥೆಗಳನ್ನು ಸ್ಥಾಪಿಸುವ ಉದ್ದೇಶ ಇರಬಾರದೆಂದು ಹೇಳಿದೆ. ಅದಕ್ಕೆ ಸೆಕ್ಷನ್ (51) ಪುಷ್ಟಿ ಕೊಡುತ್ತದೆ. ಅದು ಈ ರೀತಿ ಇದೆ :

"ಅನುದಾನವನ್ನು ಅಥವಾ ಇತರ ಮೂಲಗಳಿಂದ ಸ್ವೀಕರಿಸಿದ ಹಣವನ್ನು ರಾಜ್ಯ ಸರ್ಕಾರವು ಅನುಮೋದಿಸಿದ ಬ್ಯಾಂಕಿನಲ್ಲಿ ಸಂಸ್ಥೆಯ ಲೆಕ್ಕಕ್ಕೆ ಠೇವಣಿ ಇಡಬೇಕು."

ಇದು ಏತಕ್ಕೆ ಬೇಕು ? ಮುಜರಾಯಿ ಹಣ ಇಡುವುದಕ್ಕೆ, ಸರ್ಕಾರೀ ಹಣ ಇಡುವುದಕ್ಕೆ ಕೆಲವು ಬ್ಯಾಂಕುಗಳಲ್ಲಿ ಪೈಪೋಟಿ ಇದೆ. ಅದರಲ್ಲಿ ಅವರಿಗೆ ಏನೋ ಒಂದು ಅಂಡರ್‌ಸ್ಟಾಂಡಿಂಗ್ ಇದೆ

ಆದ್ದರಿಂದ ನೀವು ಇಂಥದ್ದರಲ್ಲಿ ಇಡುವುದೆಂದು ಹೇಳುವುದು ಏತಕ್ಕೆ ಬೇಕು. ಷೆಡ್ಯೂಲ್ ಬ್ಯಾಂಕ್ ಯಾವುದಿದೆ ಅಥವಾ ರಾಷ್ಟ್ರೀಕೃತ ಬ್ಯಾಂಕ್ ಯಾವುದಿದೆ ಎಂಬುದನ್ನು ವಿಚಾರ ಮಾಡಿ ಯಾವುದರಲ್ಲಿ ಠೇವಣಿ ಇಡಬೇಕೆಂದು ತೀರ್ಮಾನ ಮಾಡಲಿ.

ರಾಜ್ಯ ಸರ್ಕಾರ ಅನುಮೋದಿಸಬಹುದಾದಂಥ ಬ್ಯಾಂಕಿನಲ್ಲಿ ಎನ್ನುವುದು ಏತಕ್ಕೆ ಬೇಕಾಗಿತ್ತು ? ಹಣ ಇಡಬೇಕಾದ್ದು ಎಲ್ಲಿ ಎಂದು ಹೇಳಲಿ, ರಾಷ್ಟ್ರೀಕೃತ ಬ್ಯಾಂಕಿನಲ್ಲಿ, ಷೆಡ್ಯೂಲ್ ಬ್ಯಾಂಕಿನಲ್ಲಿ ಇಡ ಬಹುದು ಎನ್ನುವುದನ್ನು ಹೇಳಲಿ. ಸರ್ಕಾರ ಅನುಮೋದಿಸಬಹುದಾದಂಥ ಬ್ಯಾಂಕಿನಲ್ಲಿ ಎಂಬುದು ಇದು ಏತಕ್ಕೆ ಇರಬೇಕಾಗಿತ್ತು ? ಇದು ನನಗೆ ಸರಿಕಾಣುವುದಿಲ್ಲ.

ಸೆಕ್ಷನ್ 53ರಲ್ಲಿ "ಅನುದಾನವನ್ನು ತಡೆಹಿಡಿಯಲು, ಕಡಿಮೆ ಮಾಡಲು ಅಥವಾ ಹಿಂತೆಗೆದು ಕೊಳ್ಳಲು ರಾಜ್ಯ ಸರ್ಕಾರದ ಅಧಿಕಾರ", ಎಂದಿದೆ. ಅದರ 7ನೇ ಕಲಂನಲ್ಲಿ ಏನು ಹೇಳುತ್ತದೆ ಎಂದರೆ, ಇಂಥಿಂಥ ಕಾರಣ ಎಂದು ಹೇಳಿ, ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳಿಗೆ ಸಂದಾಯವಾಗಬೇಕಾಗಿರುವ ಅನು ದಾನವನ್ನು ತಡೆಹಿಡಿಯಬಹುದು, ಕಡಿಮೆ ಮಾಡಬಹುದು ಅಥವಾ ಹಿಂತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಈಗ ಕೆಲವು ಸಂದರ್ಭದಲ್ಲಿ ಏಕಾಏಕಿ ತೀರ್ಮಾನ ಮಾಡುವಾಗ, ನಿಯಮಾವಳಿಗಳನ್ನು ಹಾಕಲಿ. ಆದರೆ ಒಂದು ವಿಷಯವನ್ನು ಮುಖ್ಯವಾಗಿ ಪರಿಗಣನೆ ಮಾಡಬೇಕಾಗಿತ್ತು. ಅಲ್ಲಿರತಕ್ಕಂಥ ಶಿಕ್ಷಕರು, ಅಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳು, ಇವರಿಗೆ ತೊಂದರೆ ಆಗದ ರೀತಿಯಲ್ಲಿ ಈ ಅನು ದಾನವನ್ನು ತಡೆಹಿಡಿಯುವಂತೆ ಮಾಡಬೇಕು, ಪೂರ್ಣ ಅಂಶಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ವಿಷಯದ ತೀರ್ಮಾನಕ್ಕೆ ಬರಬೇಕು ಎನ್ನತಕ್ಕದ್ದನ್ನು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಅಲ್ಲಿರತಕ್ಕ ಶಿಕ್ಷಕರು ಬೀದಿ ಪಾಲಾಗಬೇಕಾಗುತ್ತೆ. ಅಲ್ಲಿರತಕ್ಕ ವಿದ್ಯಾರ್ಥಿಗಳ ಯಾವುದೇ ತಪ್ಪು ಇಲ್ಲ. ಅಲ್ಲಿ ಅನುದಾನ ಬರುತ್ತ ದೆಂದು ಸೇರಿಕೊಂಡಿರುತ್ತಾರೆ. ವಿದ್ಯಾರ್ಥಿಗಳು ರೆಕಗ್ನಿಷನ್ ಇಲ್ಲದೇ ಇರುವ ಶಾಲೆಗಳಿಗೆ ಸೇರಿದರೆ ತಪ್ಪು. ಅನುದಾನ ಬರುವ ಶಾಲೆಗಳಿಗೆ ಸೇರಿಕೊಂಡಿರುವವರಿಗೆ ವರ್ಷದ ಕೊನೆಯ ಅವಧಿಯಲ್ಲಿ ಇವ ರಿಗೆ ತೊಂದರೆ ಆಗದ ರೀತಿಯಲ್ಲಿ ಆ ವರ್ಷದ ಅನುದಾನವನ್ನು ಕೊಟ್ಟು ಅಲ್ಲಿರತಕ್ಕ ಶಿಕ್ಷಕರು ಮುಂದುವ ರಿಯುವುದಕ್ಕೆ ಅವಕಾಶ ಮಾಡಬೇಕಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರ ಬಯಸುತ್ತೇನೆ.

ಅಧ್ಯಾಯ : 11.— "ಸಹಾಯ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ಸ್ವತ್ತು ಮತ್ತು ವರ್ಗಾವಣೆ ಮಾಡಲು ನಿಷೇಧ."

ಅಧ್ಯಕ್ಷರೇ, ಕೆಲವು ಸಂದರ್ಭದಲ್ಲಿ ಸರ್ಕಾರದ ಅನುಮತಿ ಇಲ್ಲದೆ, ಶಿಕ್ಷಣ ಸಂಸ್ಥೆಗಳು ಭೂಮಿ ಹಾಗೂ ಕಟ್ಟಡಗಳನ್ನು ವರ್ಗಾಯಿಸಲು ನಿಷೇಧ ಎನ್ನುವುದರಲ್ಲಿ, ರಾಜ್ಯದ ನಿಧಿಯಿಂದ ಕೊಡಲಾದ, ಯಾವುದೇ ಅನುದಾನದ ಸಹಾಯದಿಂದ ಯಾವುದೇ ಶಿಕ್ಷಣ ಸಂಸ್ಥೆಗಳ ಉದ್ದೇಶಕ್ಕಾಗಿ ಯಾವುದೇ ಭೂಮಿ ಅಥವಾ ಕಟ್ಟಡವನ್ನು ನಿರ್ಮಿಸಿದ್ದರೆ ಸುಧಾರಣೆಗೊಳಿಸಿದ್ದರೆ, ಅಥವಾ ಬದಲಾಯಿಸಿದ್ದರೆ ಎಂದು ಬರೆದುಕೊಂಡು ಹೋಗಿದ್ದಾರೆ. ಇವತ್ತು ಅನೇಕ ಶಿಕ್ಷಣ ಸಂಸ್ಥೆಗಳ ಆಸ್ತಿ ಹೇರಳವಾಗಿ ಇದೆ. ಇವೆಲ್ಲಾ ನಿಯಮಗಳ ತೊಂದರೆ ಯಾರಿಗೆ ಎಂದರೆ, ಇನ್ನುಮುಂದೆ ಮಾಡತಕ್ಕಂಥ ಶಿಕ್ಷಣ ಸಂಸ್ಥೆಗಳಿಗೆ ಹೊರತು, ಹಿಂದೆ ಮಾಡಿ ಯಾರು ಶ್ರೀಮಂತರಾಗಿದ್ದಾರೆ, ಯಾರು ಆಸ್ತಿ ಮಾಡಿಕೊಂಡು ಇದ್ದಾರೆ ಅವರ ಮೇಲೆ ನಿಯಂತ್ರಣ ಸಾಧಿಸುವುದಕ್ಕಾಗುವುದಿಲ್ಲ ಎನ್ನುವಂಥಾದ್ದು ಇದಕ್ಕೆ ಉದಾಹರಣೆ. ಇಲ್ಲಿ ವಿದ್ಯಾ ರ್ಥಿಗಳಿಂದಲೂ ಸಂಗ್ರಹ ಮಾಡಿರುತ್ತಾರೆ, ಸಾರ್ವಜನಿಕರಿಂದಲೂ ಸಂಗ್ರಹಿಸಿರುತ್ತಾರೆ, ಇಂಥಾ ದ್ದನ್ನು ವರ್ಗಾವಣೆ ಮಾಡಕೂಡದೆಂದು ಕಡ್ಡಾಯ ಮಾಡಿ.

ರಾಜ್ಯದ ನಿಧಿಯಿಂದ ಕೊಡಲಾದ ಯಾವುದೇ ಅನುದಾನದ ಸಹಾಯದಿಂದ ಯಾವುದೇ ಶಿಕ್ಷಣ ಸಂಸ್ಥೆಗಳ ಉದ್ದೇಶಗಳಿಗಾಗಿ, ಯಾವುದೇ ಕಟ್ಟಡ ಅಥವಾ ಭೂಮಿ ಎಂದು ಏನು ಹೇಳಿದ್ದಾರೆ, ಇದು ಸಾಕಾಗುವುದಿಲ್ಲ. ಯಾರು ಶೋಷಣೆಮಾಡಿ ಹಣ ಸಂಗ್ರಹಣೆ ಮಾಡಿದ್ದಾರೆ ಅವರ ಮೇಲೆ ಒಂದು ನಿಯಂತ್ರಣ ಇರಬೇಕೆಂಬುದು ಸ್ಪಷ್ಟವಾಗಬೇಕಾಗುತ್ತದೆ. ಅನೇಕ ರೀತಿಯಲ್ಲಿ ದುರ್ವ್ಯವಹಾರಗಳಿಂದ ಖಾಸಗಿ ವಿದ್ಯಾಸಂಸ್ಥೆಗಳು, ಭಾರಿ ಹಣ ಸಂಗ್ರಹಣೆ ಮಾಡುವುದು ಇದ್ದು, ಅನೇಕರು ಆಸ್ತಿ ಸಂಗ್ರಹಣೆ ಮಾಡಿದ್ದು ಇದೆ. ಇದರ ಮೇಲೆ ನಿಮ್ಮ ನಿಯಂತ್ರಣ ಇರಬೇಕು. ರಾಜ್ಯದ ನಿಧಿಯಿಂದ ಕೊಡಲಾದ ಯಾವುದೇ ಅನುದಾನದ ಸಹಾಯದ ಬಗ್ಗೆ ವರ್ಗಾವಣೆ ಮಾಡಕೂಡದೆಂದು ನಿಯಮ ಹಾಕಿದ್ದಾರೆ. ಇದು ವಿದ್ಯಾರ್ಥಿಗಳಿಂದ ಸಂಗ್ರಹಿಸಿರಬಹುದು. ಇದರ ಮೇಲೆ ತಮ್ಮ ನಿಯಂತ್ರಣ ಇರಬೇಕು.

ಇದೇ ಪ್ರಕರಣದಲ್ಲಿ ರಾಜ್ಯ ಸರ್ಕಾರವು ಯಾವೊಬ್ಬ ವ್ಯಕ್ತಿಯ ಸೇವೆಯನ್ನು ಕೊನೆಗೊಳಿಸಿ, ಬರಹದಲ್ಲಿ ತಿಳಿಸಬೇಕಾದ ಕಾರಣಗಳಿಗಾಗಿ, ಮೂರು ಕ್ಯಾಲೆಂಡರ್ ನೋಟೀಸನ್ನು ಇವರಿಗೆ ಕೊಟ್ಟು, ತರುವಾಯ ಅಥವಾ ನೋಟೀಸಿಗೆ ಬದಲಾಗಿ ಮೂರು ತಿಂಗಳ ವೇತನವನ್ನು ಪಾವತಿ ಮಾಡಿದ ತರು

ಾಯ ಸೇವೆಯನ್ನು ಕೊನೆಗೊಳಿಸಬೇಕು ಎಂದು ಹೇಳಿದ್ದಾರೆ. ಇದು ಬಹಳ ಅನ್ಯಾಯವಾಗುತ್ತದೆ, ಯಾರಿಗೆ ಎಂದರೆ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಬಹಳ ಕಾಲದಿಂದ ಶಿಕ್ಷಕರು ಏನು ಸೇವೆ ಮಾಡಿದ್ದಾರೆ. ಅವರ ಸೇವಾಹಿರಿತನ ಮತ್ತೆ ಅವರು ಎಷ್ಟು ವರ್ಷದಿಂದ ಸೇವೆ ಮಾಡಿದ್ದಾರೆ ಎನ್ನುವುದನ್ನು ಗಣನೆಗೆ ತೆಗೆದುಕೊಂಡು ಅವರನ್ನು ಸರ್ಕಾರಿ ಸೇವೆಗೆ ತೆಗೆದುಕೊಳ್ಳಬೇಕೇ ಹೊರತು, ಅವರ ಆಸ್ತಿ ನಿಮಗೆ ಸೇರಬಹುದು ಆದರೆ ಆ ಶಿಕ್ಷಣ ವ್ಯವಸ್ಥೆ ಮುಂದುವರಿಯಬೇಕಾಗುತ್ತದೆ. ಈ ಕಾರಣಕ್ಕೋಸ್ಕರ ಇದನ್ನು ರದ್ದುಪಡಿಸಿದ ಕೂಡಲೇ ಈ ಒಂದು ಶಿಕ್ಷಕರನ್ನು ಮನೆಗೆ ಕಳುಹಿಸುವುದು ಸರಿಯಲ್ಲ. ಅವರ ಸೇವೆ ಯನ್ನು ಮುಂದುವರಿಸಬೇಕು ಎನ್ನುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಎನ್ನತಕ್ಕಂತಾದ್ದನ್ನು ಹೇಳು ತ್ತೇನೆ. ಅಲ್ಲದೆ ಈ ಖಾಸಗಿ ಶಾಲೆಗಳ ಶಿಕ್ಷಕರಿಗೆ ಮತ್ತು ಶಿಕ್ಷಕೇತರ ಸಿಬ್ಬಂದಿಗೆ, ಸರ್ಕಾರಿ ನೌಕರರು ಸೇವೆಯಿಂದ ನಿವೃತ್ತರಾದಾಗ ಸಿಗುವ ಎಲ್ಲಾ ಸೌಲಭ್ಯಗಳು ಅಂದರೆ ನಿವೃತ್ತಿ ವೇತನ, ಇತ್ಯಾದಿ ಫಲ ಗಳು ಇವರಿಗೂ ಅನ್ವಯಿಸುವಂತೆ, ಅವಕಾಶ ಇಲ್ಲದೇ ಹೋದರೆ, ಆ ಅವಕಾಶವನ್ನು ಮಾಡಿಕೊಡ ಬೇಕೆಂದು ಕೇಳಿಕೊಂಡು ಮತ್ತೊಮ್ಮೆ ಈ ಒಂದು ಬಿಲ್ಲಿನ ವಿಚಾರದ ಬಗ್ಗೆ ವಿನಂತಿ ಮಾಡಿಕೊಳ್ಳುವು ದೇನೆಂದರೆ, ನಿಜವಾಗಿಯೂ ಶಿಕ್ಷಣ ಸುಧಾರಣೆ ಆಗಬೇಕು ಎನ್ನುವ ಪ್ರಾಮಾಣಿಕ ಮನಸ್ಸು ಇದ್ದರೆ, ಈ ಖಾಸಗಿ ವ್ಯವಸ್ಥೆ ಇದೇ ರೀತಿ ಮುಂದುವರಿದರೆ ಇದು ಶೋಷಣೆಗೆ ಮೂಲ. ಆದುದರಿಂದ ಈ ಖಾಸಗಿ ವ್ಯವಸ್ಥೆಯನ್ನು ಪರಿಗಣನೆಗೆ ತೆಗೆದುಕೊಂಡು, ವಿದ್ಯಾಭ್ಯಾಸದ ಕನಿಷ್ಠ ಅವಶ್ಯಕತೆಗಳನ್ನು ಸರ್ಕಾರ ಎಲ್ಲಾ ಪ್ರಮಾಣದಲ್ಲಿ ಒದಗಿಸಿಕೊಡುವ ಜವಾಬ್ದಾರಿಯ ಕಡೆ ಮನಸ್ಸು ಮಾಡುವುದು ಒಳ್ಳೆಯದು. ಈ ಒಂದು ಸಲಹೆಯನ್ನು ಪೂರ್ಣ ವಿಚಾರ ಮಾಡಿ ಇರತಕ್ಕಂಥ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಿ ಕೈಗೆ ತೆಗೆದುಕೊಂಡರೆ ಕಷ್ಟವಾಗುವುದಿಲ್ಲ. ಅರ್ಧ ಮನಸ್ಸಿನಿಂದ ಹೊರಟರೆ ಉದ್ದೇಶ ಸಫಲವಾಗು ವುದಿಲ್ಲ ಎನ್ನುವುದನ್ನು ವ್ಯಕ್ತಮಾಡಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಾಲೂರು ನಾಗರಾಜ್.—ಮಾನ್ಯ ಅಧ್ಯಕ್ಷರೇ, ನಾಳೆ ನನ್ನ ಕ್ಷೇತ್ರದಲ್ಲಿ ಸಾರ್ವಜನಿಕ ಸಂಪರ್ಕ ಸಭೆ ಮಾಡುತ್ತಿದ್ದಾರೆ. ಸರ್ಕಾರದ ವತಿಯಿಂದ ಮಾನ್ಯ ಲಕ್ಷ್ಮೀಪತಿಯವರು ಅಧ್ಯಕ್ಷತೆ ವಹಿಸು ತ್ತಾರೆ. ಮಾನ್ಯ ನಜೀರ್‌ಸಾಬ್ ಅವರು ಉದ್ಘಾಟನೆ ಮಾಡುತ್ತಾರೆ. ಇದು ನನ್ನ ಕ್ಷೇತ್ರದಲ್ಲಿ ಆಗು ತ್ತಿದ್ದರೂ, ನನ್ನನ್ನು ಬಿಟ್ಟಿದ್ದಾರೆ. ನಾಳೆ ಕಾರ್ಯಕ್ರಮ ಇದೆ.

ಛೇರ್ಮನ್.—ಇದನ್ನು ಯಾವ ನಿಯಮದಲ್ಲಿ ಹೇಳುತ್ತಿದ್ದೀರಿ ?

ಶ್ರೀ ಮಾಲೂರು ನಾಗರಾಜ್.—ಅಧ್ಯಕ್ಷರೆ ಅಲ್ಲಿ ಪಬ್ಲಿಕ್ ನ್ಯೂಸೆನ್ಸ್ ಆಗುತ್ತದೆ. ಆದುದರಿಂದ ಸಂಬಂಧಪಟ್ಟ ಮಂತ್ರಿಗಳನ್ನು ಕರೆಸಿ, ಈ ಸಭೆಯನ್ನು ಮುಂದೂಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಇದು ಒಬ್ಬ ಶಾಸಕನ ಒಂದು ಹಕ್ಕಿನ ಪ್ರಶ್ನೆ. ಬೆಳಿಗ್ಗೆ ಈ ವಿಚಾರವನ್ನು ತರಲು ಅವಕಾಶ ಇರಲಿಲ್ಲ. ಈಗತಾನೆ ವರ್ತಮಾನ ಬಂತು. ತಾವು ಪರಾಂಬರಿಸಿ ನೋಡಬೇಕು. ಇದು ಒಂದು ಪಕ್ಷದ ಸಭೆ, ಪ್ರತ್ಯೇಕ ಮಾಡತಕ್ಕದ್ದು ಸರಿಯಲ್ಲ. ಪಕ್ಷದ ಸಭೆ ಮಾಡಬಹುದು. ಪಕ್ಷದ ಸಭೆ ಆಗಿದ್ದರೆ ಇದನ್ನು ಎತ್ತುತ್ತಿರಲಿಲ್ಲ. ತಹಸೀಲ್ದಾರರು ಮತ್ತು ಬಿ.ಡಿ.ಓ. ಅವರು ನೋಟೀಸ್ ಕೊಟ್ಟಿದ್ದಾರೆ. ಮಾನ್ಯ ನಾಗರಾಜ್ ಅವರ ಕ್ಷೇತ್ರದಲ್ಲಿ ಸಾರ್ವಜನಿಕ ಸಂಪರ್ಕ ಸಭೆ ಇದೆ. ಇದರಲ್ಲಿ ಸ್ಪಷ್ಟವಾಗಿ ಕಾಣಿಸಿದ್ದಾರೆ. 28-3-1984ರಂದು ಬುಧವಾರ 9 ಗಂಟೆಗೆ ಇದೇ ಮಾಲೂರು ತಾಲ್ಲೂಕು, ಚಿಕ್ಕತಿರುಪತಿಯಲ್ಲಿ ಸಾರ್ವಜನಿಕ ಸಂಪರ್ಕ ಸಭೆ ಇದೆ. ಕರ್ನಾಟಕ ರಾಜ್ಯದ ಮಾನ್ಯ ಸಣ್ಣ ನೀರಾವರಿ ಸಚಿವರಾದ ಶ್ರೀ ಆರ್. ಎನ್. ಲಕ್ಷ್ಮೀಪತಿ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಲು ದಯೆಯಿಟ್ಟು ಒಪ್ಪಿಕೊಂಡಿರುತ್ತಾರೆ. ಮತ್ತು ಮೇಲ್ಕಂಡ ಜನಸಂಪರ್ಕ ಸಭೆಯಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಚಿವರಾದ ಶ್ರೀ ನಜೀರ್ ಸಾಹೇಬರು ಸಭೆಯ ಉದ್ಘಾಟನೆ ಮಾಡಲು ದಯೆಯಿಟ್ಟು ಒಪ್ಪಿಕೊಂಡಿರುತ್ತಾರೆ. ಎಂದು ಹೇಳಿ ನೋಟೀಸ್ ಜಾರಿ ಮಾಡಿದ್ದಾರೆ.

4 p.m.

Mr. Chairman.—Are you suggesting to the Speaker to cancel the function.

Sri M. Veerappa Moily.—No, But it is a question of previlege. ಒಬ್ಬ ಶಾಸಕನ ಕ್ಷೇತ್ರದಲ್ಲಿ, ಇಬ್ಬರು ಸಚಿವರು ಹೋಗಿ ಸಾರ್ವಜನಿಕ ಸಂಪರ್ಕ ಸಭೆಯಲ್ಲಿ ಭಾಗವಹಿಸಿ, ಸರಕಾರಿ ಕೆಲಸ ಮಾಡುವುದು ಇದ್ದರೆ, ಶಾಸಕರು ಏತಕ್ಕೆ ಇಲ್ಲಿರಬೇಕು. ಆ ಸಾರ್ವಜನಿಕ ಸಭೆಯಲ್ಲಿ

ಘನತೆ ಗೌರವದಿಂದ ನಾವು ಭಾಗವಹಿಸುವುದು ಬೇಡವೇ ? ಘನತೆ ಗೌರವ ಏನಿದ್ದರೂ ಈ ಸದನದ ಒಳಗಡೆ ಇರತಕ್ಕಂಥಾದ್ದು, ಈ ಸದನದ ಹೊರಗೆ ಏನಿಲ್ಲ ಎಂದು ತಾವು ಹೇಳುತ್ತೀರಾ ? ಈ ರೀತಿ ಆದರೆ ನಾವು ಹೇಗೆ ಕೆಲಸ ಮಾಡಬೇಕು ?

ಛೇರ್ಮನ್.—ವ್ಯವಸ್ಥೆ ಮಾಡಿರುವವರು ಯಾರು ಎಂದು ಹೇಳಬೇಕಲ್ಲ ?

ಶ್ರೀ ಎಂ. ವೀರಪ್ಪ ಮೋಯಿಲಿ.—ಸರಕಾರಿ ಅಧಿಕಾರಿಗಳು ಎಂದು ಹೇಳಿದೆನಲ್ಲ. ಯಾರೋ ಕರೆದಿದ್ದರೆ, ಜನತಾ ಪಕ್ಷದವರು ಕರೆದರೆ We don't mind it. ಆದರೆ ಸರಕಾರಿ ಅಧಿಕಾರಿಗಳು ಎಂದು ಇರುವಾಗ ಇದು ಹೇಗೆ ಆಗುತ್ತದೆ ?

ಶ್ರೀ ಗೋವಿಂದ ಪಿ. ಒಡೆಯರಾಜ್.—ಇದು ಮೊದಲನೇ ಸಲ ಅಲ್ಲ. ತಮಗೆ ಗೊತ್ತಿರಬಹುದು, ಅನೇಕ ಸಲ ಈ ರೀತಿ ಆಗಿದೆ. ಈ ಕಡೆಯ ಸದಸ್ಯರು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಇದನ್ನು ತಂದಿದ್ದಾರೆ. ಒತ್ತಾಯಪೂರ್ವಕವಾಗಿ ಕೇಳಿದ್ದಾರೆ. ಆಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಈ ರೀತಿ ತಪ್ಪು ಮಾಡುವುದಿಲ್ಲ, ಎಲ್ಲಾ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಆದೇಶ ಕೊಟ್ಟು ಶಾಸಕರನ್ನು ಕಡೆಗಾಣಿಸಬಾರದು, ಅವರನ್ನೂ ಕೂಡ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಹೇಳುತ್ತೇನೆ ಎಂದು ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿದ್ದಾರೆ.

ಛೇರ್ಮನ್.—ಅದರ ಬಗ್ಗೆ ಚರ್ಚೆ ಮಾಡುವುದು ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಸದಸ್ಯರ ಪ್ರಿವಿಲೇಜನ್ನು ಕಾಪಾಡದೇ ಹೋದರೆ, ಯಾರು ಕಾಪಾಡಬೇಕು ? ಇದು ಮುಖ್ಯವಾದ ಪ್ರಶ್ನೆ.

ಛೇರ್ಮನ್.— ಛೇರ್ಮನ್ ಕಡೆಯಿಂದ ನೀವು ಏನು ನಿರೀಕ್ಷಣೆ ಮಾಡುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸರಕಾರ ಸದಸ್ಯರಿಗೆ ರಕ್ಷಣೆ ಕೊಡುವುದಿಲ್ಲ. ತಾವು ರಕ್ಷಣೆ ಕೊಡದೇ ಹೋದರೆ ನಮಗೆ ಇನ್ನು ಯಾರು ರಕ್ಷಣೆ ಕೊಡಬೇಕು. You have got to uphold the rights of the Hon'ble Members. ನೀವು ಸರಕಾರದವರ ಕಿವಿ ಹಿಂಡ ಬೇಕಾಗುತ್ತದೆ. ಇಲ್ಲದೆ ಹೋದರೆ ಅವರಿಗೆ ಬುದ್ಧಿ ಬರುವುದಿಲ್ಲ. ಅವರಿಗೆ ಬುದ್ಧಿ ಬರುವ ಲಕ್ಷಣನೂ ಕಾಣುವುದಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಹತ್ತಾರು ಸಾರಿ ಈ ವಿಷಯವನ್ನು ನಾವು ಸರಕಾರದ ಗಮನಕ್ಕೆ ತರುತ್ತಿದ್ದೇವೆ, ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇವೆ. ಉದ್ದೇಶ ಪೂರ್ವಕವಾಗಿ, ರಾಜಕೀಯ ಮಾಡಬೇಕೆಂದು ಈ ರೀತಿ ಮಾಡಿದರೆ, ಅದು ನ್ಯಾಯವೇ ಎಂಬುದನ್ನು ನಾವು ಕೇಳುತ್ತಿದ್ದೇವೆ.

Mr. Chairman.—What immediate relief I can give ?

ಶ್ರೀ ಎಂ. ವೀರಪ್ಪ ಮೋಯಿಲಿ.—ಈ ತರಹ ಮೀಟಿಂಗ್ ಕಂಡಕ್ಟ್ ಮಾಡುವುದು ಬೇಡ. ಮುಂದಿನ ತಾರೀಖನ್ನು ನಿರ್ಧಾರ ಮಾಡಿ, ಆಗ ಶಾಸಕರನ್ನೂ ಕರೆದು ಮಾಡಿ ಎಂದು ಆದೇಶ ಕೊಡಬಹುದು,

Mr. Chairman.—So your purpose is served.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಇದನ್ನು ಆಮೇಲೆ ವಿಚಾರ ಮಾಡಬಹುದು. ಸಭೆ ಮುಗಿದ ಮೇಲೆ ವಿಚಾರ ಮಾಡಬಹುದು. ಇದು ಸರಕಾರದ ಗಮನಕ್ಕೆ ಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ನಾಳೆ 9 ಗಂಟೆಗೆ ಈ ಸಭೆ ಇರುವುದರಿಂದ ಇದನ್ನು ಎತ್ತುತ್ತಿದ್ದೇವೆ. ಇಲ್ಲದೇ ಹೋದರೆ ಇದನ್ನು ನಾವು ಎತ್ತುತ್ತಿರಲಿಲ್ಲ. ತಹಸೀಲ್ದಾರರು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಈ ಮೀಟಿಂಗ್ ಕರೆದಿದ್ದಾರೆ. ತಮಗೆ ಗೊತ್ತಿರಬಹುದು ಶ್ರೀ ದೇವೇಗೌಡರ ಕ್ಷೇತ್ರದಲ್ಲಿ ದೊಡ್ಡಹಳ್ಳಿ ಪ್ರಕರಣ ಎಂದು ಹೇಳಿ ಆಯಿತು, ಅದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಆಯಿತು. ಆ ವರದಿ ಇನ್ನೂ ಹೊರಗೆ ಬಂದಿಲ್ಲ. ಆ ಕ್ಷೇತ್ರದ ಶಾಸಕರನ್ನು ಬಿಟ್ಟಿದ್ದಕ್ಕೆ ನಾವು ನೋವು ಆಯಿತು. ಇದನ್ನು ತಿಳಿದೂ ಈ ರೀತಿ ಒಂದು ತೊಂದರೆಯನ್ನು ತಂದುಕೊಳ್ಳುವುದು ಬೇಡ, ಶಾಸಕರನ್ನು ಸಂಪೂರ್ಣವಾಗಿ ಕಡೆಗಣಿಸಿ, ಅವರಿಗೆ ಒಂದು ಅವಮಾನ ಮಾಡಬೇಕೆಂದು ಸರಕಾರ ಹೋಗುವುದು ಇದ್ದರೆ ಆ ರೀತಿ ಆಗಲಿ. ಅವರೇನೂ ರಕ್ಷಣೆ ಮಾಡುವುದಿಲ್ಲ. ಅವರು ರಕ್ಷಣೆ ಮಾಡ ತಕ್ಕ ಲಕ್ಷಣನೂ ತೋರುತ್ತಿಲ್ಲ. ತಾವು ಇದರ ಬಗ್ಗೆ ತಕ್ಷಣ, ಇಂತಹ ಚಟುವಟಿಕೆಗಳನ್ನು ಇವರು ನಿಲ್ಲಿಸಲಿ ಎಂದು, ತಾವು ಹುಕುಮ್ ಕೊಡಬೇಕಾಗುತ್ತದೆ.

ಛೇರ್ಮನ್.—ಅವರಿಗೆ ಆಹ್ವಾನ ಕಳುಹಿಸಿ ಎನ್ನುವ ನಿರ್ದೇಶನವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಆಹ್ವಾನದ ಪ್ರಶ್ನೆ ಅಲ್ಲ. ಅವರು ಕಾರ್ಯಕ್ರಮವನ್ನು ಏತಕ್ಕೆ ಮಾಡಬೇಕು. ಇದರಲ್ಲಿ ಶಾಸಕರ ಗೌರವದ ಪ್ರಶ್ನೆ ಇದೆ. ಸದನದ ಹೊರಗಡೆ ಶಾಸಕರಿಗೆ ಏನೂ ಗೌರವ ಕೊಡಬಾರದು ಎಂದು ಇದೆಯೇ ?

Mr. Chairman.—How can I know, under what circumstances it has been arranged ?

ಶ್ರೀ ಗೋವಿಂದ ಪಿ. ಒಡೆಯರಾಜ್.—ಸರ್ಕಮ್‌ಸ್ಟನ್ಸಸ್ ಏನು ಬೇಕಾದರೂ ಇರಬಹುದು. ಒಂದು ಕಲ್ಪನೆ ಮಾಡೋಣ, ತಮ್ಮ ಕ್ಷೇತ್ರದಲ್ಲಿ ತಮ್ಮನ್ನು ಬಿಟ್ಟು ಸಭೆ ಮಾಡುವುದಾದರೆ, ತಮಗೆ ಯಾವ ರೀತಿಯಲ್ಲಿ ಬೇಜಾರಾಗುತ್ತದೆ. ಇದನ್ನು ತಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇದು ಶಾಸಕರ ಗೌರವದ ರಕ್ಷಣೆ ಪ್ರಶ್ನೆ. ಶಾಸಕರು ತಮ್ಮ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕರ ಆದುದರಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ತಹಸೀಲ್ದಾರರು, ಬಿ.ಡಿ.ಓ. ಗಳು ಮಾಸ್ ಕಾಂಟಾಕ್ಟ್ ಮೀಟಿಂಗ್ ಕಂಡಕ್ಟ್ ಮಾಡುತ್ತಿದ್ದಾರೆ. ಮಾನ್ಯ ಶಾಸಕರನ್ನು ಕಡೆಗಣಿಸಿ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಇದು ಸರಿಯಾದುದಲ್ಲ.

(ಮಾನ್ಯ ಸಭಾಧ್ಯಕ್ಷರು, ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶಾಸಕರ ಗೌರವ ರಕ್ಷಣೆಗೋಸ್ಕರ ತಾವು ಮುಂದೆ ಬರಬೇಕು. ಆ ಫಂಕಶನ್ ನಾಳೆ ಮಾಡಬಾರದು. ಮುಂದಿನ ತಾರೀಖನ್ನು ಗೊತ್ತುಪಡಿಸಿ, ಅದನ್ನು ಮಾಡುವಾಗ ಶಾಸಕರನ್ನು ಕರೆಸಿ ಅವರನ್ನೂ ಸೇರಿಸಿ ಈ ಸಮಾರಂಭ ಮಾಡಬೇಕೆಂದು ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ನಾಗರಾಜ್.—ಮಾನ್ಯ ಅಧ್ಯಕ್ಷರೇ ಇದು ನನ್ನ ಹಕ್ಕಿನ ಪ್ರಶ್ನೆ ಅಲ್ಲಿ ಗಲಾಟೆಗಳಾಗುವ ಪರಿಸ್ಥಿತಿ ಬರುತ್ತದೆ. ಕೂಡಲೇ ಅದನ್ನು ನಿಲ್ಲಿಸಬೇಕೆಂದು ತಾವು ನಿರ್ದೇಶನ ಕೊಡಬೇಕಾಗುತ್ತದೆ.

ಶ್ರೀ ಕೆ. ಮಲ್ಲಪ್ಪ.—ಗಲಾಟೆಗಳೇನೂ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಗಲಾಟೆ ಮಾಡಿಸಬೇಕಾ ? ಹಾಗಾದರೆ ಗಲಾಟೆ ಆಗಬೇಕೆಂದು ತಮ್ಮ ಉದ್ದೇಶ ಇದ್ದರೆ ಹೇಳಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಗಲಾಟೆ ಆಗಬೇಕೆಂದು ಮಾಡುತ್ತಿದ್ದಾರೆ ಎಂದರೆ ಆ ಸಂಗತಿ ಬೇರೆ. ಗಲಾಟೆ ಆಗಲೇ ಬೇಕೆಂಬ ಉದ್ದೇಶದಿಂದ ಈ ಏರ್ಪಾಡು ಮಾಡುತ್ತಿದ್ದರೆ ಆ ಸಂಗತಿ ಹೇಳಿ. ಗಲಾಟೆ ಆಗಬಾರದು, ಸರಕಾರಕ್ಕೆ ಕಿರಿಕಿರಿ ಆಗಬಾರದು ಎಂಬ ಉದ್ದೇಶದಿಂದ ನಾವು ಹೇಳುತ್ತಿದ್ದೇವೆ. ಈ ನೋಟೀಸನ್ನು ತಮಗೆ ಕಳುಹಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ತಾವು ಕಾಪಾಡದಿದ್ದರೆ, ದೇವರೇ ನಮ್ಮನ್ನು ಕಾಪಾಡಲಿಕ್ಕೆ ಬರಬೇಕು ಅಥವಾ ಕಾನೂನನ್ನು ಶಾಸಕರು ಕೈಗೆ ತೆಗೆದುಕೊಳ್ಳತಕ್ಕ ಪರಿಸ್ಥಿಗೆ ದೂಡಬಾರದು. ಇದರ ಬಗೆ ಇಲ್ಲಿ ಅನೇಕ ಸಾರಿ ಪ್ರಸ್ತಾಪ ಆಗಿದೆ. ಅನೇಕ ಬಾರಿ ಹೇಳಿದ್ದೇವೆ. ಆದರೂ ಶಾಸಕರನ್ನು ನಿರ್ಲಕ್ಷಿಸಿ ಹೋಗುತ್ತಿದ್ದಾರೆ. ಇದು ಸರಕಾರದ ಕಾರ್ಯಕ್ರಮ, ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮ. ಆದರೂ ಶಾಸಕರನ್ನು ಕಡೆಗಣಿಸಿದ್ದಾರೆ. ಶಾಸಕರನ್ನು ಕರೆಸಿ ಆ ಕೆಲಸ ಮಾಡಬೇಕಾಗಿಲ್ಲ ಎಂದು ತಾವು ರೂಲಿಂಗ್ ಕೊಟ್ಟುಬಿಡಿ. ಅದರಿಂದಲಾದರೂ ನಾವು ಸಮಾಧಾನದಿಂದ ಕುಳಿತುಕೊಳ್ಳುತ್ತೇವೆ. ಇಲ್ಲದಿದ್ದರೆ ಇದನ್ನು ಸಹಿಸಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು. ರೂಲಿಂಗ್ ಕೊಡದಿದ್ದರೆ ನಮ್ಮ ಮರ್ಯಾದೆಯ ರಕ್ಷಣೆಗೆ ಯಾರು ಬರಬೇಕು, ಯಾರಲ್ಲಿ ನಾವು ಮೊರೆ ಇಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಶಾಸಕರು, ಶಾಸನ ಸಭೆಯಲ್ಲಿ ಕೆಲಸ ಮಾಡತಕ್ಕಂಥ ಕಾಲದಲ್ಲಿ ಅವರನ್ನು ಕೇಳದೆ ಅವರಿಗೆ ಆಹ್ವಾನ ಕೊಡದೇ, ಈ ರೀತಿಯಾಗಿ, ಅವರ ಕ್ಷೇತ್ರದಲ್ಲಿ ಹೋಗಿ, ಸರಕಾರಿ ಕೆಲಸವನ್ನು ಮಾಡತಕ್ಕದ್ದು ಸೂಕ್ತವಲ್ಲ ಎಂದು ಹೇಳಿದ್ದೇವೆ. ಬಹುಶಃ ಇದು ಎಲ್ಲರೂ ಒಪ್ಪಿಕೊಂಡಿದ್ದ ಮಾತು. ಈ ದೃಷ್ಟಿಯಿಂದ ನಾನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ. ಈಗ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎ. ನಾಗರಾಜ್.—ಆ ಕಾರ್ಯಕ್ರಮವನ್ನು ರದ್ದು ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾಳೆ 28ನೇ ತಾರೀಖು ಬೆಳಿಗ್ಗೆ 9 ಗಂಟೆಗೆ ಸನ್ಮಾನ್ಯ ಸಚಿವರಾದ ಲಕ್ಷ್ಮೀಪತಿ ಅವರು, ಮಾನ್ಯ ನಜೀರ್ ಸಾಹೇಬರೂ, ಮಾಲೂರು ತಾಲ್ಲೂಕು ಚಿಕ್ಕತಿರುಪತಿಯಲ್ಲಿ ಹೋಗಿ ಸಾರ್ವಜನಿಕ ಸಂಪರ್ಕ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ. ಕ್ಷೇತ್ರಾಭಿವೃದ್ಧಿ ಅಧಿಕಾರಿಗಳೂ, ತಹಸೀಲ್ದಾರರೂ ಆ ಸಭೆಯನ್ನು ಕರೆದಿದ್ದಾರೆ. ಆ ಕ್ಷೇತ್ರದ ಶಾಸಕ ಶ್ರೀ ಎ. ನಾಗರಾಜ್ ಅವರನ್ನು

ಸಂಪೂರ್ಣವಾಗಿ ಅಲಕ್ಷಿಸಿದ್ದಾರೆ. ಇಂತಹ ಸಭೆಯನ್ನು ಏತಕ್ಕೆ ಮಾಡುವುದು ? ಆ ಸಭೆಗೆ ಇವರನು ಆಹ್ವಾನ ಮಾಡಲಿಲ್ಲ. ನೀವು ಆಹ್ವಾನ ನೀಡಿದ್ದಾಗ ಅವರು ಅದನ್ನು ತಿರಸ್ಕರಿಸಿದ್ದರೆ, ಆ ಮಾತ್ನು ಬೇರೆ. ಈ ಸಭೆಯನ್ನು ರದ್ದು ಮಾಡಬೇಕು. ರದ್ದು ಮಾಡಬೇಕು ಸದಸ್ಯರ ಹಕ್ಕಿಗೆ ಚ್ಯುತಿ ಬರುತ್ತದೆ.

ಸಭಾಧ್ಯಕ್ಷರು.—ಸದಸ್ಯರ ಹಕ್ಕಿಗೆ ಶಾಸನ ಸಭೆಯಲ್ಲಿ ಚ್ಯುತಿ ಬರುತ್ತದೆ ಎಂಬುದನ್ನು ಒಪ್ಪಬಹುದೇ ? ಆದರೆ ಸರಕಾರ ಮಾಡತಕ್ಕಂಥ ಪ್ರತಿಯೊಂದು ಕೆಲಸಕ್ಕೂ ಶಾಸಕರನ್ನು ಕರೆಯಬೇಕು ಎಂದರೆ ಹೇಗೆ ?

Sri M. Veerappa Moily —Literally it may not be true, .Legally it may not be true, But ನೈತೀಕವಾಗಿ ಒಬ್ಬ ಶಾಸಕ ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸದನದಲ್ಲಿ ಅವನು ಹೇಗೆ ಕೆಲಸ ಮಾಡಬೇಕು.

ಮಾನ್ಯ ಅಧ್ಯಕ್ಷರೇ, ಸ್ಥಳೀಯ ಶಾಸಕರಿಗೆ ಅವರ ಕ್ಷೇತ್ರದಲ್ಲಿ ನಡೆಯುವಂಥಾ ಸಕಾರದ ಸಮಾರಂಭದಲ್ಲಿ ಜನತೆಯ ಪ್ರತಿನಿಧಿಗಳಾಗಿ ಭಾಗವಹಿಸಲು ಅವರಿಗೇ ಆದೇಶ ಕೊಡದೇ ಹೋದರೆ ಆ ಜನ ಅವರಿಗೆ ಹೇಗೆ ಗೌರವ ಕೊಡಬೇಕು ? ಆ ಸ್ಥಳೀಯ ಶಾಸಕರನ್ನು ಕೈಬಿಟ್ಟು ಆ ಎಲ್ಲಾ ಕಾರ್ಯಕ್ರಮಗಳನ್ನೂ ನೀವು ಮಾಡುವುದಾದರೆ ನಾವು ಜನತೆಯ ಪ್ರತಿನಿಧಿಗಳಾಗಿ ಇನ್ನಾವ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ ಎನ್ನುವುದನ್ನು ನೀವೇ ಹೇಳಿ. ಈ ವಿಷಯವನ್ನು ಆ ಶಾಸಕರು ಸುಮ್ಮನೆ ಮುಗಂ ಆಗಿ ಹೇಳಿದರು ಅಷ್ಟೇ. ಆ ಸಮಾರಂಭ ನಿಜವಾಗಿಯೂ ನಡೆಯುವುದಾದರೆ ಸ್ಥಳೀಯ ಶಾಸಕರನ್ನು ಕೈಬಿಟ್ಟು ನಡೆಸುವುದಾದರೆ ಅದು ಸರಿಯಲ್ಲ. ಮತ್ತು ನಾಳೆಯ ದಿವಸ ಇಲ್ಲಿ ಅಧಿವೇಶನ ನಡೆಯುತ್ತಾ ಇರುವುದರಿಂದ ಈ ಸ್ಥಳೀಯ ಶಾಸಕರನ್ನು ಕೈಬಿಡುವುದಾದರೆ ಆ ಸಮಾರಂಭವನ್ನು ರದ್ದು ಮಾಡಬೇಕು ಎಂದು ಹೇಳುತ್ತೇನೆ ಅಲ್ಲದೆ ಇನ್ನೂ ಮುಂದಕ್ಕಾದರೂ ಕೂಡ ಇದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.— ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ನಮ್ಮ ಊರಿನಲ್ಲಿ 3 ಕೋಟಿ ರೂಪಾಯಿನ ಒಂದು ಪ್ರಾಜೆಕ್ಟ ಆಗಬೇಕಾಗಿತ್ತು, ಆವಾಗ ಮಾರ್ಗದ ಮಲ್ಲಪ್ಪನವರು ಮಂತ್ರಿಗಳಾಗಿದ್ದರು, ನಾನು ಒಂದು ಮಾರ್ಕೆಟ್‌ನ ಅಧ್ಯಕ್ಷನಾಗಿದ್ದೆ. ಆಗ ಈ ಒಂದು ದೊಡ್ಡ ಸಮಾರಂಭಕ್ಕೆ ಮಾರ್ಗದ ಮಲ್ಲಪ್ಪನವರನ್ನೂ ಮತ್ತು ಸಹಕಾರ ಮಂತ್ರಿಗಳನ್ನೂ ಆಹ್ವಾನಿಸಿದ್ದೆ. ನಾನು ಜನತಾಪಕ್ಷದಲ್ಲಿದ್ದೇನೆಂದು ಅವರು ಬರಲಿಲ್ಲ. ಅದೇ ಸಮಾರಂಭವನ್ನು ನನ್ನ ಅಧ್ಯಕ್ಷತೆಯಲ್ಲೇ ಪ್ರಾರಂಭ ಮಾಡಿದೆ. ಹಿಂದಿನ ಸರ್ಕಾರದಲ್ಲಿ ಈ ರೀತಿಯಾಗಿ ಎಷ್ಟೋ ನಡೆದಿದೆ.

ಅಧ್ಯಕ್ಷರು.— ಯಾವುದೇ ಆಗಲಿ ಒಬ್ಬರಿಗೊಬ್ಬರಿಗೆ ಹೊಂದಣಿಕೆಯಂತೆ ಕೆಲಸಮಾಡಿಕೊಂಡು ಹೋಗಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಸರ್ಕಾರದವರು ಯಾವುದೇ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಿದಾಗ ಆಯಾಯ ಕ್ಷೇತ್ರದ ಶಾಸಕರನ್ನು ಕರೆಸಬೇಕು, ಅವರನ್ನು ಬಿಟ್ಟು ಮಾಡಬಾರದು ಎಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮಂತ್ರಿಗಳಿಗೂ ಕೂಡ ಕಾಗದ ಬರೆದಿದ್ದಾರೆ. ಅವರು ಯಾವ ಹಸ್ತಪತ್ರಿಕೆಯನ್ನು ನೋಡಿದರೋ ನನಗೆ ಗೊತ್ತಿಲ್ಲ. ಅದೇನೇ ಇರಲಿ ಆ ಸಮಾರಂಭಕ್ಕೆ ಅವರು ಬರಬೇಕು ಎನ್ನುವ ಆದೇಶ ಅವರಿಗೆ ಕಳುಹಿಸಬೇಕು ಎಂದು ಹೇಳುತ್ತೇನೆ. ಒಂದುವೇಳೆ ಅವರು ಬರಲಿಕ್ಕೆ ಆಗಲಿಲ್ಲ ಎಂದರೆ ಅವರಿಗೆ ಯಾವತ್ತು ಬಿಡುವು ಆಗುತ್ತದೋ ಅದನ್ನು ಕೇಳಿಕೊಂಡು ಆ ಸಮಾರಂಭವನ್ನು ಮುಂದಕ್ಕೆ ಹಾಕತಕ್ಕದ್ದು ಎನ್ನುವ ಆದೇಶವನ್ನು ಕಳುಹಿಸುವಂಹೇಳುತ್ತೇನೆ. ಆದರೆ ಒಂದು ವಿಷಯ ಏನೆಂದವರು ಮಾನ್ಯ ವಿರೋಧಪಕ್ಷದ ನಾಯಕರು ಇದರ ಮೇಲೆ ಒಂದು ಭಾಷಣ ಮಾಡಿದ್ದಾರೆ. ಆಕಾಶ ತಲೆಮೇಲೆ ಬಿದ್ದುಹೋಯಿತೋ ಎನ್ನುವ ಹಾಗೇ ಹೇಳಿದ್ದಾರೆ ಇವರನ್ನು ಕರೆಯದೇ ಈ ರೀತಿ ಮಾಡುವುದಾದರೆ ನಾನು ಮುಂದೆ ಯಾವ ಕಾರ್ಯಕ್ರಮವನ್ನೂ ಕೂಡ ಮಾಡುವುದಕ್ಕೆ ಬಿಡೋದಿಲ್ಲ ಅಂತ ದೊಡ್ಡ ಭಾಷಣ ಮಾಡಿದ್ದಾರೆ. ಮಾನ್ಯ ವೀರಪ್ಪಮೊಯ್ಲಿರವರು ಮಂತ್ರಿಗಳಾಗಿದ್ದಾಗ ದೊಡ್ಡಹಳ್ಳಿ ಸಮಾರಂಭಕ್ಕೆ ಯಾರನ್ನು ಕರೆದಿದ್ದರು. ಆದುದರಿಂದ ದೊಡ್ಡಹಳ್ಳಿಗೂ ಚಿಕ್ಕತಿರುಪತಿಗೂ ಹೋಲಿಸಬೇಡಿ. ಒಬ್ಬರು ಶ್ರೀ ದೇವೇಗೌಡರನ್ನು ಕರೆಯಬೇಕು, ಇನ್ನೊಬ್ಬರು ಶ್ರೀ ಶ್ರೀಕಂಠಯ್ಯನವರನ್ನು ಕರೆಯಬೇಕು ಎಂದು ಇತ್ತು. ಅದೇನೇ ಇರಲಿ ಈಗ ಈ ಒಂದು ಸಮಾರಂಭಕ್ಕೆ ಸ್ಥಳೀಯ ಶಾಸಕರಾದಂಥಾ ನಾಗರಾಜ್ ಅವರನ್ನು ಕರೆಯಲಿಲ್ಲ ಎಂದು ಹೇಳಿದ್ದಾರೆ ಅದು ಸರಿಯಲ್ಲ. ಆದರೆ ಶ್ರೀ ವೀರಪ್ಪಮೊಯ್ಲಿರವರೇ ಎದ್ದುನಿಂತುಕೊಂಡು ಇಂಥಾ ಮಾತನಾಡುವುದು ಸರಿಯಲ್ಲ. ಹಾಗೆ ಮಾಡಬೇಡಿ.

ಶ್ರೀ ಎಂ. ವೀರಪ್ಪಮೊಯ್ಲಿ.— ಸಾಮ, ದಾನ ಭೇದ ಇವು ಮೂರಕ್ಕೂ ಆಗದೇ ಹೋದರೆ ಉಳಿದಿರುವುದು ಕೊನೆಯದು ದಂಡ ತಾನೇ.

ಶ್ರೀ ಎ. ಲಕ್ಷ್ಮೀಸಾಗರ್.— ಶ್ರೀ ವೀರಪ್ಪಮೊಯ್ಲಿರವರು ಚತುರೋಪಾಯಗಳಲ್ಲಿ ದಂಡವನ್ನೇ ಮೊದಲು ಉಪಯೋಗಿಸುತ್ತಾರೆ. ಅವರಿಗೆ ಬೇರೆ ಇನ್ನಾವುದೂ ಉಪಯೋಗಿಸುವುದೇ ಗೊತ್ತಿಲ್ಲ. ಬರೇ ತತ್ವ ಮಾತ್ರ ಮಾತನಾಡುತ್ತಾರೆ. ಏನೋ ಇದರಿಂದ ಆಕಾಶ ಕಳಚಿಬಿದ್ದುಹೋಯಿತು ಅನ್ನುವ ರೀತಿಯಲ್ಲಿ ಮಾತನಾಡಿದ್ದಾರೆ ಅದು ಸರಿಯಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

Mr. Speaker.— Now we shall take up discussion for short duration under rule 68.

V. Discussion for short duration under rule 68.

Re : Tardy progress in execution of Hemavathy Left Bank Canal.

ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್).— ಮಾನ್ಯ ಅಧ್ಯಕ್ಷರೇ, ಭಾರತದೇಶದಲ್ಲಿ ವ್ಯವಸಾಯ ಬಹಳ ಪ್ರಧಾನವಾದುದು. ಈ ದೇಶದಲ್ಲಿ ವ್ಯವಸಾಯಗಾರನಿಗೆ ನೀರಿನ ಪ್ರಾಮುಖ್ಯತೆ, ನೀರಿನ ಅವಶ್ಯಕತೆ ಎಷ್ಟು ಇರಬೇಕೋ ಅಷ್ಟು ಇಲ್ಲ ಅನ್ನುವುದನ್ನು ಒತ್ತಿ ಹೇಳುವ ಆವಶ್ಯಕತೆ ಇಲ್ಲ. ವ್ಯವಸಾಯಗಾರನಿಗೆ ಉತ್ತಮವಾದ ಬೀಜ ಮತ್ತು ಉತ್ತಮವಾದ ಗೊಬ್ಬರ ಕೊಟ್ಟರೂ ಕೂಡ ಅವನಿಗೆ ನೀರು ಇಲ್ಲದೇಹೋದರೆ, ನೀರನ್ನು ಸಾಕಷ್ಟು ಒದಗಿಸದೇ ಹೋದರೆ ಅವನ ಬೆಳೆಯೆಲ್ಲಾ ಹಾಳಾಗಿ ಹೋಗುತ್ತದೆ ಇಂಥಾ ಒಂದು ದಾರುಣ್ಯ ಪರಿಸ್ಥಿತಿಯನ್ನು ನಾವು ಪ್ರತಿವರ್ಷವೂ ನೋಡುತ್ತಾ ಇದ್ದೇವೆ. ಈ ಒಂದು ಪರಿಸ್ಥಿತಿಯನ್ನು ನೀಗಲಿಕ್ಕಾಗಿ ಕಾವೇರಿ ನದಿ ಮತ್ತು ಹೇಮಾವತಿ ನದಿಗೆ ಅಣೆಕಟ್ಟನ್ನು ಕಟ್ಟುವ ಒಂದು ಯೋಜನೆಯನ್ನು ಸುಮಾರು 1968ರಲ್ಲಿ ಪ್ರಾರಂಭಮಾಡಿ 1980ರಲ್ಲಿ ಮುಗಿಸದರು. ಈ ಒಂದು ಯೋಜನೆಗೆ ಇವೊತ್ತಿನ ವೆಚ್ಚ 386 ಕೋಟಿ ರೂಪಾಯಿಗಳು. ಈ ಒಂದು ಯೋಜನೆಯ ಪ್ರಕಾರ 6 ಲಕ್ಷ 55 ಸಾವಿರ ಎಕರೆ ಭೂಮಿಗೆ ನೀರನ್ನು ಉಣಿಸಿ ರೈತನ ಒಂದು ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಬೇಕಾಗಿತ್ತು. ರೈತನಿಗೋಸ್ಕರ ಈ ಒಂದು ಯೋಜನೆಯನ್ನು ನಿರೂಪಿಸಲಾಯಿತು. ಇದು 1968ರಲ್ಲಿ ಮೊದಲು ಪ್ರಾರಂಭಮಾಡಿದರೂ ಕೂಡ 1973ನೇ ಇಸವಿಗೆ ತುಮಕೂರು ಜಿಲ್ಲೆಯ ಗುಬ್ಬಿ, ತಿಪಟೂರು, ತುಮಕೂರು ಮತ್ತು ಕುಣಿಗಲ್ ಇದರ ಜೊತೆಗೆ ಮಂಡ್ಯ ಜಿಲ್ಲೆಯ ಯಾವಾಗಲೂ ಬರಗಾಲ ಆಗಿರತಕ್ಕಂಥಾ ನಾಗಮಂಗಲ ತಾಲ್ಲೂಕಿನ ಕೆಲವು ಸ್ಥಳಗಳಿಗೆ ಈ ನೀರನ್ನು ಕೊಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು, ಇದು ದುರಾದೃಷ್ಟವೋ ಅದೃಷ್ಟವೋ ನನಗೆ ಗೊತ್ತಿಲ್ಲ. 1973ನೇ ಇಸವಿಗೆ ಆ ಸ್ಥಳಗಳಿಗೆ ಈ ನೀರನ್ನು ಕೊಡಬೇಕೆನ್ನುವ ತೀರ್ಮಾನ ತೆಗೆದುಕೊಂಡಿದ್ದರೂ ಕೂಡ ಆ ಸ್ಥಳಗಳಿಗೆ ನೀರನ್ನು ಒದಗಿಸಲಿಲ್ಲ ಎಂದು ಹೇಳುತ್ತೇನೆ. ಅಷ್ಟೇ ಅಲ್ಲ ಬಾಗೂರು ನವಿಲೆ ಸುರಂಗ ಮಾರ್ಗವನ್ನೂ ಸಹ ತೋಡುವ ಕೆಲಸವನ್ನೂ ಸಹ 1979ನೇ ಇಸವಿಯವರೆಗೂ ಮಾಡಲಿಲ್ಲ. ಈ ರೀತಿಯಾಗಿ ಇದುವರೆಗೆ ಈ ಯೋಜನೆಯಲ್ಲಿ ಹಿಡಿದಿಟ್ಟಿರುವ ನೀರನ್ನು ಉಪಯೋಗಿಸಿಕೊಳ್ಳದೇ ಇರುವುದು ನಮ್ಮ ದುರಾದೃಷ್ಟಕರ ಎಂದು ಹೇಳಬೇಕಾಗಿದೆ. ಈ ಪರಿಸ್ಥಿತಿಯನ್ನು ನಾವು ನೋಡಿದಾಗ ಈ ಬಗ್ಗೆ ತೀರ್ಮಾನ ತೆಗೆದುಕೊಂಡು 6 ವರ್ಷವಾದರೂ ಕೂಡ ಈ ಬಾಗೂರು ನವಿಲೇ ಸುರಂಗಮಾರ್ಗವನ್ನು ಇದುವರೆಗೂ ಏತಕ್ಕೆ ಮಾಡಲಿಲ್ಲ, ಈ ಬಗ್ಗೆ ಹಿಂದಿನ ಸರ್ಕಾರವೇ ಆಗಲಿ ಯಾವ ಸರ್ಕಾರವೇ ಆಗಲಿ, ಈವೊತ್ತಿನ ದಿವಸ ಇದಕ್ಕೆ ಉತ್ತರ ಹೇಳಬೇಕು ಎಂದು ನಾನು ಬಯಸುತ್ತೇನೆ. ಲಕ್ಷಾಂತರ ಜನರ ಒಕ್ಕಲಿಗರ ಪರವಾಗಿ ನಾನು ಈ ಮಾತನ್ನು ಕೇಳುತ್ತಿದ್ದೇನೆ. ಈ ಬಾಗೂರು ನವಿಲೇ ಸುರಂಗಮಾರ್ಗ 1973ರಿಂದ 1979ನೇ ಇಸವಿಯವರೆಗೂ ತೋಡುವ ಕೆಲಸವನ್ನು ಏತಕ್ಕೆ ಮಾಡಲಿಲ್ಲ ಎಂದು ಕೇಳುತ್ತಿದ್ದೇನೆ. ಆಗಿನ ಸರ್ಕಾರ ಇದನ್ನು ಏತಕ್ಕೆ ಮಾಡಲಿಲ್ಲ, ಇದಕ್ಕೆ ತಾವು ಉತ್ತರ ಹೇಳಬೇಕು. ಈ ಅವಧಿಯಲ್ಲಿ ಈ ಕೆಲಸ ಮಾಡದೇ ಇರುವುದರಿಂದ ನನಗೆ ಅಪಾರವಾದ ದುಃಖವಾಗುತ್ತದೆ. 6 ಲಕ್ಷದ 55 ಸಾವಿರ ಎಕರೆಗೆ ನೀರು ಒದಗಿಸುವಂಥಾ ಈ ಒಂದು ಯೋಜನೆಯನ್ನು ನಿರೂಪಿಸತಕ್ಕಂಥಾ ಅಧಿಕಾರ ಸ್ಥಾನದಲ್ಲಿರುವವರನ್ನು ನಾವು ಕೇಳಬೇಕಾಗಿದೆ. ಮತ್ತು ಅಧಿಕಾರ ಮಾಡಬೇಕು ಎಂದು ಬುಡಬುಡಿಕೆ ಹೊಡೆದುಕೊಂಡು ತಿರುಗಾಡುತ್ತಾ ಇರತಕ್ಕಂಥಾ ರಾಜಕಾರಿಣಿಗಳನ್ನು ನಾನು ಪ್ರಶ್ನೆ ಮಾಡುತ್ತೇನೆ. ಮೊದಲು 6 ಲಕ್ಷ 55 ಸಾವಿರ ಎಕರೆಗೆ ನೀರನ್ನು ಕೊಟ್ಟು ಉಳಿದ 5 ಲಕ್ಷ 75 ಸಾವಿರ ಎಕರೆಗೆ ನೀರನ್ನು ಕೊಡುವ ಹಾಗೆ ಯೋಜನೆಯನ್ನು ನಿರೂಪಿಸಿದ್ದಾರೆ. ಅವರು ಅಧಿಕಾರದಲ್ಲಿರುವಾಗ ಈ ಒಂದು ಯೋಜನೆಯನ್ನು ನಿರೂಪಿಸಲು ಅಧಿಕಾರ ಚಲಾಯಿಸಿದಂಥಾ ರಾಜಕಾರಿಣಿಗಳು ಏನು ಇದ್ದಾರೆ ಆ ಕಾಲದಲ್ಲಿ ಅವರು ಏನೂ ಮಾಡಲಿಲ್ಲ. ಇಂದಿನ ಪರಿಸ್ಥಿತಿ ನೋಡಿದರೆ ಇನ್ನು 10 ವರ್ಷವಾದರೂ ಕೂಡ ಈ ಕಾಲುವೆ ಕೆಲಸಗಳು ಮುಗಿಯುವುದಕ್ಕೆ ಸಾಧ್ಯವಾಗುವುದಿಲ್ಲ. 1980ನೇ ಇಸವಿಯಲ್ಲಿ